

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 | Issue : 211 | Wednesday 30-04-2025 | E-mail : maruti.b.hosamani76@gmail.com | Page: 4 | Price : Rs. 1/-


# ದದ್ದಲ್, ಉಮಳಿಪನ್ನೂರಲ್ಲಿ ಸ್ಯಾಂಡ್ ಮಾಫಿಯಾ ಸದ್ದೋ ಸದ್ದು: ಪರಶುರಾಮ ಚೌಡ್ಕಿ



**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಅಕ್ರಮ ಮರಳು ಮಾಫಿಯಾ ದಂಧೆಯನ್ನು ತಡೆಯಲು ಕೇಂದ್ರ ಹಾಗೂ ರಾಜ್ಯ ಸರಕಾರ ಕಟ್ಟು ನಿಟ್ಟಿನ ಮಾನದಂಡಗಳನ್ನು ಜಾರಿಗೆ ತಂದಿದೆ. ಆದರೆ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ದದ್ದಲ್. ಉಮಳಿ ಪನ್ನೂರು, ಹರನಹಳ್ಳಿ,ಜೂಕೂರು ಸೇರಿದಂತೆ ತುಂಗಭದ್ರಾ ನದಿ ಆಸುಪಾಸಿನ ಗ್ರಾಮಗಳಲ್ಲಿ ಹಗಲು ರಾತ್ರಿ ಎನ್ನದೆ ರಾಜಾರೋಷವಾಗಿ ಟಿಪ್ಪರ್ ಗಳಲ್ಲಿ ಅಕ್ರಮವಾಗಿ ಮರಳು ಸಾಗಣೆಯಾದರು ಇಲ್ಲಿ ಕಾನೂನು ಇದೇನಾ ಇಲ್ಲವಾ ಎಂದು ಜನರ ಪ್ರಶ್ನೆಯಾಗಿದೆ. ಅಗ್ನಿ ಎಂದೇ ಹೆಸರು ವಾಸಿಯಾದ ಮಾನ್ವಿ ಪಿಐ ಕೆಂಚರೆಡ್ಡಿ ಅವರು ಅಕ್ರಮ ಮರಳು ಮಾಫಿಯಾ ದಂಧೆ ತಡೆಯಲು ಹಗಲಿರುಳು ಶ್ರಮಿಸುತ್ತಿದ್ದು, ಮರಳು ಖದೀಮರಿಗೆ ಕೆಂಚರೆಡ್ಡಿ ಹೆಸರು ಕೇಳಿದರೆ ಸಾಕು ಭಯ ಸೃಷ್ಟಿಯಾಗಿದೆ. ಆದರೆ ನಾವು ಹೇಗಾದರಾಗಲಿ ಅಕ್ರಮವಾಗಿ ಮರಳು ಸಾಗಣೆ ಮಾಡಬೇಕು ಎಂದು ನಿತ್ಯ ರಾಜಾರೋಷವಾಗಿ ಮರಳು ಸಾಗಣೆ ಮಾಡಿ ಲಕ್ಷಾಂತರ ರೂಪಾಯಿ ಗಳಿಸಬೇಕು ಎಂದು ರಾಯಲ್ಟಿ ಇಲ್ಲದೆ ಪೊಲೀಸ್ ಇಲಾಖೆಯ ಕಣ್ಣು ತಪ್ಪಿಸಿ ಮರಳು ಸಾಗಣೆ ಮಾಡುವ ತಂತ್ರಗಾರಿಕೆಯ ದಂಧೆ ಇಲ್ಲಿ ಹೆಚ್ಚಾಗಿದೆ. ದದ್ದಲ್, ಉಮಳಿ ಪನ್ನೂರು, ಜೂಕೂರು,ಹರನಹಳ್ಳಿ ಗ್ರಾಮದಲ್ಲಿ ಗಣಿ ಇಲಾಖೆ ಜಾಗೂ ಮಾನ್ವಿ ಪೊಲೀಸ್ ಇಲಾಖೆಯವರು ಕಣ್ಣಾಡಿಸಿದರೆ ಸಾಕು ತುಂಗಭದ್ರಾ ನದಿಯಲ್ಲಿಯೇ ಜೆಸಿಬಿ, ಇಟಾಚಿಯನ್ನು ಇಟ್ಟು ನೇರವಾಗಿ ರಾಯಲ್ಟಿ ಇಲ್ಲದೆ ಟಿಪ್ಪರ್ ಗಳಿಗೆ ತುಂಬಲಾಗುತ್ತದೆ.ಯಾರಾದರು ಟಿಪ್ಪರ್ ಗಳನ್ನು ಹಿಡಿದರೆ ಹೇಗೆ ಎಂದು ಕೇಳಿದರೆ ಈ ಭಾಗದ ಕೆಲ ರಾಜಕಾರಣಿಗಳು ನಾನೆಂಬ ಅಹಂಕಾರದಿಂದ ಯಾರು ಬರಲ್ಲ ನಮ್ಮದು ನಡೆಯುತ್ತೆ ಎಂದು ರಾಯಚೂರು ಹಾಗೂ ಮಾನ್ವಿ ತಾಲೂಕಿನಿಂದ ಬರುವ ಒಂದು ಟಿಪ್ಪರ್ ಗೆ 10 ಸಾವಿರ ರೂಪಾಯಿ ವಸೂಲಿ ಮಾಡುವ ಕರಾಳ ದಂಧೆ ಈ ಭಾಗದಲ್ಲಿ ನಡೆಯುತ್ತಿದೆ. ಈ ಭಾಗದ ಕೆಲ ರಾಜಕಾರಣಿಗಳು ಸಚಿವರು ಶಾಸಕರು, ಗಣಿ ಇಲಾಖೆ, ಪೊಲೀಸ್ ಹಾಗೂ ಕಂದಾಯ ಅಧಿಕಾರಿಗಳು ಗೊತ್ತು ನಾವೆಲ್ಲ ಅವರನ್ನು ನೋಡಿ ಕೊಳ್ಳುತ್ತೇವೆ ನಿಮ್ಮ ಟಿಪ್ಪರ್ ಕಳಿಸಿ ಎಂದು ಅಧಿಕಾರಿಗಳು ಹಾಗೂ ಶಾಸಕರು, ಸಚಿವರ ಹೆಸರು ದುರ್ಬಳಕೆ ಮಾಡಿ ಕೊಳ್ಳುವ ದಂಧೆ ನಡೆಯುತ್ತಿದೆ ಅಂದರೆ ಈ ಕೆಲ ರಾಜಕಾರಣಿಗಳು ಇಂತವರಿಗೆ ಬೆಂಬಲವಾಗಿ ನಿಂತಿದ್ದಾರಾ ಎಂದು ಬುದ್ಧಿ ಜೀವಿಗಳ ಪ್ರಶ್ನೆಯಾಗಿದೆ.

ದದ್ದಲ್, ಉಮಳಿ ಪನ್ನೂರು, ಜೂಕೂರು ಹಾಗೂ ಹರನಹಳ್ಳಿ ಗ್ರಾಮದಲ್ಲಿ ಹಾದು ಹೋದ ತುಂಗಭದ್ರಾ ನದಿಗೆ ನೇರವಾಗಿ ಕನ್ನ ಹಾಕುತ್ತಿದ್ದರಿಂದ ಜೀವ ಜಲಚರಗಳು ಸತ್ತರು ಸಹ ಕಿಂಗ್ ಪಿನ್ ಮರಳು ಖದೀಮರಿಗೆ ಹಣ ಗಳಿಸಬೇಕು ಎಂಬುದೆ ಮೂಲ ಉದ್ದೇಶವಾಗಿದೆ.

ಅಗ್ನಿ ಎಂದೇ ಹೆಸರು ವಾಸಿಯಾದ ಪಿಐ ಕೆಂಚರೆಡ್ಡಿ ಸಾಹೇಬ್ರ ದದ್ದಲ್, ಉಮಳಿ ಪನ್ನೂರು, ಹರನಹಳ್ಳಿ, ಜೂಕೂರು,ರಾಜೊಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಸಾಗಣೆ ಮಾಡುವ ದಂಧೆಕೋರರಿಗೆ ಚಳಿ ಬಿಡಿಸುತ್ತಾರಾ ಅಥವಾ ದೇಶದ ಸಂಪತ್ತು ಲೂಟಿಯಾದರು ನಮಗ್ಯಾಕೆ ಬೇಕು ಎಂದು ಸುಮ್ಮನೆ ಕೂರುತ್ತಾರಾ ಎಂದು ಜನರ ಪ್ರಶ್ನೆಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

**ಮಾನ್ವಿ ತಾಲೂಕಲ್ಲಿ ಕಾನೂನು ಅನ್ನೋದು ಇಲ್ಲವಾಗಿದ್ದರಿಂದ ತುಂಗಭದ್ರಾ ನದಿಯ ಪಾತ್ರವಾದ ಹರನಹಳ್ಳಿ, ದದ್ದಲ್, ಜೂಕೂರು, ಉಮಳಿ ಪನ್ನೂರು, ರಾಜೊಳ್ಳಿ ಗ್ರಾಮದಲ್ಲಿ ಮರಳಿನ ಸದ್ದು ಕೇಳಿ ಬಂದರು ಕಂದಾಯ,ಗಣಿ ಇಲಾಖೆ ಅಧಿಕಾರಿಗಳು ಈ ಬಗ್ಗೆ ಕ್ರಮ ಜರುಗಿಸದೆ ಮೌನ ತಾಳಿದ್ದಾರೆ.**

**ಹೆಸರು ಹೇಳಲಿಚ್ಛಿಸದ, ಉಮಳಿ ಪನ್ನೂರು ಗ್ರಾಮಸ್ಥ**

**ತಹಸೀಲ್ದಾರ್ ಭೀಮರಾಯ ಸಾಹೇಬ್ರು ಕ್ರಮ ಜರುಗಿಸುತ್ತಾರಾ?**

ಮಾನ್ವಿ ತಾಲೂಕಿನ ದದ್ದಲ್, ಉಮಳಿ ಪನ್ನೂರು, ಜೂಕೂರು, ರಾಜೊಳ್ಳಿ, ಹರನಹಳ್ಳಿ ಗ್ರಾಮದ ಮೂಲಕ ಹಾದು ಹೋದ ತುಂಗಭದ್ರಾ ನದಿಯಿಂದ ಹಗಲು ರಾತ್ರಿ ಎನ್ನದೆ ಅಕ್ರಮವಾಗಿ ಮರಳು ಸಾಗಣೆಯಾದರು ಈ ಭಾಗದ ಗ್ರಾಮ ಲೆಕ್ಕಾಧಿಕಾರಿ ಹಾಗು ಕಂದಾಯ ನಿರೀಕ್ಷಕರ ದುರಾಡಳಿತಕ್ಕೆ ಮಾನ್ವಿ ತಹಸೀಲ್ದಾರ್ ಭೀಮರಾಯ ಸಾಹೇಬ್ರು ಕ್ರಮ ಜರುಗಿಸಿ ಅಕ್ರಮ ದಂಧೆಗೆ ಬ್ರೇಕ್ ಹಾಕುವರಾ ಎಂದು ಗ್ರಾಮಸ್ಥರ ಪ್ರಶ್ನೆಯಾಗಿದೆ.

---

**ಅಕ್ರಮ ಮರಳು ಸದ್ದು, ಬೀಟ್ ಪೊಲೀಸರು ಮಲಗಿದ್ದಾರಾ?**

ಮಾನ್ವಿ ತಾಲೂಕಿನ ದದ್ದಲ್, ಉಮಳಿ ಪನ್ನೂರು, ಜೂಕೂರು, ಹರನಹಳ್ಳಿ ಹಾಗೂ ರಾಜೊಳ್ಳಿಯಲ್ಲಿ ಅಕ್ರಮವಾಗಿ ಹಗಲು ಮತ್ತು ರಾತ್ರಿ ರಾಯಲ್ಟಿ ಇಲ್ಲದೆ ನದಿಯಿಂದಲೆ ನೇರವಾಗಿ ಟಿಪ್ಪರ್ ಮೂಲಕ ಸಾಗಣೆಯಾದರು ಸಹ ಇಲ್ಲಿ ಕಾನೂನು ಅನ್ನೋದು ಇಲ್ಲವಾಗಿದ್ದರಿಂದ ಈ ಭಾಗದ ಬೀಟ್ ಪೊಲೀಸರು ಯಾಕೆ ಕ್ರಮ ಜರುಗಿಸುತ್ತಿಲ್ಲ ಎಂದು ಗ್ರಾಮಸ್ಥರ ಪ್ರಶ್ನೆಯಾಗಿದೆ.

---

**ಗಣಿ ಅಧಿಕಾರಿ ಮಹೇದವಸ್ವಾಮಿ ಕಣ್ಣಿದ್ದು ಕುರುಡಾದರ.**

ಮಾನ್ವಿ ತಾಲೂಕಿನ ದದ್ದಲ್, ಹರನಹಳ್ಳಿ, ಉಮಳಿ ಪನ್ನೂರು, ಜೂಕೂರು, ರಾಜೊಳ್ಳಿ ಗ್ರಾಮದಲ್ಲಿ ನಿತ್ಯ ಹಗಲು ಮತ್ತು ರಾತ್ರಿ ಎನ್ನದೆ ಅಕ್ರಮವಾಗಿ ಮರಳು ಸಾಗಣೆಯಾದರು ಗಣಿ ಅಧಿಕಾರಿ ಮಹದೇವಸ್ವಾಮಿ ಸಾಹೇಬ್ರು ಮಾತ್ರ ಯಾಕೆ ಮೌನ ತಾಳಿದ್ದಾರೆಂದು ತಿಳಿಯದಾಗಿದ್ದು, ಗಣಿ ಅಧಿಕಾರಿ ಮಹದೇವಸ್ವಾಮಿ ಮೌನವಾಗಿದ್ದಾರೆಂದರೆ ರಾಜಕಾರಣಿಗಳ ಒತ್ತಡಕ್ಕೆ ಮಣಿದಿದ್ದಾರೆಂದು ಜನರ ಆರೋಪವಾಗಿದೆ.

---

ಮಾನ್ವಿ ತಾಲೂಕಿನ ತುಂಗಭದ್ರಾ ನದಿ ಪಾತ್ರದ ದದ್ದಲ್, ಉಮಳಿ ಪನ್ನೂರು, ಜೂಕೂರು, ಹರನಹಳ್ಳಿ, ರಾಜೊಳ್ಳಿಯಲ್ಲಿ ಅಕ್ರಮವಾಗಿ ಮರಳು ಸಾಗಣೆ ಮಾಡುತ್ತಿರುವುದು ಕಂಡು ಬಂದರೆ ಕ್ರಮ ಜರುಗಿಸುತ್ತೇವೆ.

**ಪುಟ್ಟ ಮಾದಯ್ಯ, ಎಂ.ಪೊಲೀಸ್ ವರಿಷ್ಠಾಧಿಕಾರಿ ರಾಯಚೂರು.**

---

ಮಾನ್ವಿ ತಾಲೂಕಿನ ಹರನಹಳ್ಳಿ, ದದ್ದಲ್, ರಾಜೊಳ್ಳಿ, ಉಮಳಿಪನ್ನೂರು,ಜೂಕೂರು ಗ್ರಾಮದ ಮೂಲಕ ಹಾದು ಹೋದ ತುಂಗಭದ್ರಾ ನದಿಯಿಂದ ಹಗಲು ಮತ್ತು ರಾತ್ರಿ ಟಿಪ್ಪರ್ ಮೂಲಕ ಮರಳು ಸಾಗಣೆಯಾದರು ಕಾನೂನು ಕಾಪಾಡ ಬೇಕಾದ ಅಧಿಕಾರಿಗಳು ಮಲಗಿದ್ದಾರೆ.

**ಹೆಸರು ಹೇಳಲಿಚ್ಛಿಸದ, ಹರನಹಳ್ಳಿ ಗ್ರಾಮಸ್ಥ.**

# ಬೆಂಗಳೂರಲ್ಲಿ ಮಹನೀಯರ ಜಯಂತಿಗೆ – ಮಹಾತ್ಮ ಪ್ರೊ, ಬಿ.ಕೃಷ್ಣಪ್ಪ ಸ್ಥಾಪಿತ ಡಿಎಸ್ ಎಸ್ ದಿಂದ ಕರೆ

**ಸಿಹಿ ಕಹಿ ಸುದ್ದಿ,**

**ಬಾಗಲಕೋಟೆ:** ಕರ್ನಾಟಕ ರಾಜ್ಯದಲ್ಲಿ ದಲಿತ ಸಂಘರ್ಷ ಸಮಿತಿಯ ದಲಿತ ಸೂರ್ಯ ಮಹಾತ್ಮ ಪ್ರೊ.ಬಿ,ಕೃಷ್ಣಪ್ಪನವರ ಆದರ್ಶಗಳು ಮತ್ತು ಹೋರಾಟಗಳ ಆಶಯಗಳನ್ನು ಹೊತ್ತು ಸಾವಿರಾರು ವರ್ಷಗಳ ಅಸ್ಪೃಶ್ಯತೆಯ ಆಚರಣೆ, ಗುಲಾಮಗಿರಿ ಕೊಲೆ ಅತ್ಯಾಚಾರ ಜೀತ ಪದ್ಧತಿ ದೇವದಾಸಿ ಪದ್ಧತಿ ಅಸಮಾನತೆಯ ಶೋಷಣೆಯಲ್ಲಿ ನಲುಗಿದ ಸಮುದಾಯಗಳಿಗೆ ಸಮಾನತೆಯೊಂದಿಗೆ ನಾಗರಿಕರಾಗಿ ಮುಖ್ಯವಾಹಿನಿಗೆ ತರಲು ಶ್ರಮಿಸಿದ ಅನೇಕರಲ್ಲಿ ಅನೇಕರಾದ ಗೌತಮ್ಬುದ್ಧ, ಜಗಜ್ಯೋತಿ ಬಸವಣ್ಣ, ಜ್ಯೋತಿಬಾ ಪುಲೆ, ಸಾವಿತ್ರಿ ಬಾಯಿ ಪುಲೆ, ನಾರಾಯಣ ಗುರು, ಪೆರಿಯಾರ್ ರಾಮಸ್ವಾಮಿ, ರಾಷ್ಟ್ರಪಿತ ಭಾರತ ರತ್ನ ಡಾ, ಬಾಬಾ ಸಾಹೇಬ್ ಅಂಬೇಡ್ಕರ್, ಮತ್ತು ಹಸಿರು ಕ್ರಾಂತಿಯ ಹರಿಕಾರಾದ ಡಾ, ಬಾಬು ಜಗಜೀವರಾಮ್ ರವರು ತಮ್ಮ ಕೊನೆಯ ಉಸಿರು ಇರುವ ತನಕ ಸಮಾನತೆಯ ಸಂಗ್ರಾಮಕ್ಕಾಗಿ ಹೋರಾಟ ಮಾಡಿದ್ದಾರೆ. ಈ ಮಹನೀಯರ ಹರಿಕಾರರಲ್ಲಿ ಮೊದಲಿಗರಾದ ಜಗಜ್ಯೋತಿ ಬಸವಣ್ಣ ನವರ 892 ನೇ. ಡಾ, ಬಾಬಾ ಸಾಹೇಬ ಅಂಬೇಡ್ಕರ್ ರವರ 134 ನೇ. ಹಾಗೂ ಡಾ, ಬಾಬು ಜಗಜೀವನ್ ರಾಮ್ ರವರ 118 ನೇ. ಜಯಂತಿಯನ್ನು ಬೆಂಗಳೂರಿನ ಗಾಂಧಿ ಭವನದಲ್ಲಿ ದಿನಾಂಕ 30/04/2025 ಬುಧವಾರ ದಂದು ರಾಜ್ಯ ಸಂಚಾಲಕರಾದ ತರೀಕೆರೆ ಎನ್.ವೆಂಕಟೇಶ್, ರಾಜ್ಯ ಸಂಘಟನಾ ಸಂಚಾಲಕರಾದ ಮಾರುತಿ.ಬಿ ಹೊಸಮನಿ ಬಾಗಲಕೋಟ, ರಾಜ್ಯ ಸಂಘಟನಾ ಸಂಚಾಲಕರಾದ ಶಿವಾನಂದ.ಎಂ ಸಾವಳಗಿ ಕಲಬುರ್ಗಿ, ರಾಜ್ಯ ಸಂಘಟನಾ ಸಂಚಾಲಕರಾದ ಮ್ಯಾಥ್ಯೂ ಮುನಿಯಪ್ಪ ಬೆಂಗಳೂರು, ರಾಜ್ಯ ಸಂಘಟನಾ ಸಂಚಾಲಕರಾದ ರಾಜಶೇಖರ್ ಜಾಪನೂರ ಬೆಂಗಳೂರು, ರಾಜ್ಯ ಸಂಘಟನಾ ಸಂಚಾಲಕರಾದ ವೆಂಕಟರಾಮಪ್ಪ ಕೋಲಾರ್, ರಾಜ್ಯ ಸಂಘಟನಾ ಸಂಚಾಲಕರಾದ ನಂಜಪ್ಪ.ಕೆ ಮೈಸೂರು, ರಾಜ್ಯ ಸಂ.ಸಂಚಾಲಕರಾದ ತಮ್ಮಣ್ಣ.ಕಾನಗಡ್ಡಿ ವಿಜಯಪೂರ, ರಾಜ್ಯ ಖಜಾಂಚಿಯಾದ ಮಹದೇವ ಪ್ರಸಾದ್ ಬೆಂಗಳೂರು, ರಾಜ್ಯ ಸಂಘಟನಾ ಸಂಚಾಲಕರಾದ ಲೋಕೇಶ್ ಬೆಂಗಳೂರು, ಬೆಳಗಾವಿ ವಿಭಾಗಿಯ ಸಂಚಾಲಕರಾದ ಹಣಮಂತ ಹಿರೇಮನಿ, ಮೈಸೂರು ವಿಭಾಗೀಯ ಸಂಚಾಲಕರಾದ ಕೀರ್ತಿಕುಮಾರ್, ಮುಂತಾದ ಗಣ್ಯರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಸಮಾನತೆಯ ಹರಿಕಾರರ ಜಯಂತಿಯನ್ನು ನೆರವೇರಿಸುವುದು ಜಿಲ್ಲಾ ಪದಾಧಿಕಾರಿಗಳು ತಾಲ್ಲೂಕಿನ ಪದಾಧಿಕಾರಿಗಳು ಗುರು ಹಿರಿಯರು ಸಮಾನ ಮನಸ್ಕರು ತಾವು ಬನ್ನಿ ತಮ್ಮವರನ್ನು ಕರೆ ತನ್ನಿ ಎಂದು ಜಿಲ್ಲಾ ಸಂಚಾಲಕರು ಹಾಗೂ ಸಿಹಿ ಕಹಿ ಕನ್ನಡ ದಿನ ಪತ್ರಿಕೆಯ ರಾಜ್ಯ ವಿಶೇಷ ವಾರದಿಗಾರಾದ ಯಮನೂರ.ಸಿ ಹಲಗಿ ಶಿರೂರ ಇವರು ಕರೆ ನೀಡಿದ್ದಾರೆ.




**ರಾಜ್ಯ ಮಟ್ಟದ ವಿಶೇಷ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಯಮನೂರ.ಸಿ.ಹಲಗಿ.ಶಿರೂರು.ಬಾಗಲಕೋಟೆ**

# ಕಾಲೇಜಿಗೆ 'ಎ' ಗ್ರೇಡ್ಗೆ ಶ್ರಮಿಸುವಲ್ಲಿ ಯಶಸ್ವಿ



**ಬನಹಟ್ಟಿ :** ಕಳೆದ ವರ್ಷ ಜನತಾ ಶಿಕ್ಷಣ ಸಂಘದ ತಮ್ಮಣ್ಣಪ್ಪ ಚಿಕ್ಕೋಡಿ ಮಹಾವಿದ್ಯಾಲಯವು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ 'ಎ' ಗ್ರೇಡ್ ಸ್ಥಾನ ಪಡೆಯುವ ಮೂಲಕ ಐತಿಹಾಸಿಕ ದಾಖಲೆ ನಿರ್ಮಿಸುವಲ್ಲಿ ರಾಮಣ್ಣ ಭದ್ರನ್ನವರ ಬಣ ಶ್ರಮಿಸಿದೆ ಎಂದು ಸಂಘದ ಚೇರಮನರಾಗಿದ್ದ ಬಸವಂತಪ್ಪ ಜಾಡಗೌಡ ತಿಳಿಸಿದರು.

ಬುಧವಾರ ಬನಹಟ್ಟಿಯ ಕಾಡಸಿದ್ಧೇಶ್ವರ ದೇವಸ್ಥಾನ ಆವರಣದಲ್ಲಿ ದೇವರಿಗೆ ಪೂಜೆ ಸಲ್ಲಿಸಿ, ಮತ ಯಾಚನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ ಮೂರು ವರ್ಷಗಳಲ್ಲಿ ಸಮುದಾಯ ಭವನ, ಮಾದರಿ ಕ್ಯಾಂಪಸ್, ಕ್ರೀಡಾಂಗಣ ಅಭಿವೃದ್ಧಿ, ರಸ್ತೆ ಸೇರಿದಂತೆ ಹಲವಾರು ಮಹತ್ತರ ಯೋಜನೆಗಳನ್ನು ಕೈಗೆತ್ತಿಕೊಂಡು ಇದೀಗ ಸಿಬಿಎಸ್ಇ ಪ್ರಸಕ್ತ ವರ್ಷ ಚಾಲನೆಗೆ ಅವಕಾಶ ದೊರೆಯುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದೇವೆ.

ಮತದಾರರು ಇವೆಲ್ಲದರ ಪ್ರಗತಿ ನೋಡಿ ಮತ್ತೊಮ್ಮೆ ರಾಮಣ್ಣ ಭದ್ರನ್ನವರ ಬಣಕ್ಕೆ ಸಂಪೂರ್ಣ ಆಶೀರ್ವಾದ ಮಾಡಲಿದ್ದಾರೆಂದರು.

ಶಂಕರ ಸೋರಗಾಂವಿ ಮಾತನಾಡಿ, ಪ್ರಾಮಾಣಿಕ ಹಾಗು ಶಿಕ್ಷಣದ ಕಳಕಳಿಯುಳ್ಳ ಅಭ್ಯರ್ಥಿಗಳೇ ಕಣದಲ್ಲಿದ್ದು, ಕಳೆದ ಬಾರಿಗಿಂತ ಉತ್ತಮ ಆಡಳಿತದೊಂದಿಗೆ ನೂತನ ಶೇರುದಾರರ ನೇಮಕ ಮಾಡಿಕೊಳ್ಳುವಲ್ಲಿ ಕಾನೂನಾತ್ಮಕವಾಗಿ ಪಾಲನೆ ಮಾಡಲಾಗುವದು.

ಪ್ರಮುಖವಾಗಿ ಬಹುತೇಕ ಜನರ ಒತ್ತಾಸೆಯಾಗಿದ್ದು, ಶೇರುದಾರರ ಸಂಖ್ಯೆ ಹೆಚ್ಚಿಸಿದಲ್ಲಿ ಪ್ರಬುದ್ಧ ಹಾಗು ಅಭಿವೃದ್ಧಿ ಪಡಿಸುವಲ್ಲಿ ಮತ್ತಷ್ಟು ಸಹಕಾರಿಯಾಗಲಿದೆ ಎಂದರು.

ರಾಮಣ್ಣ ಭದ್ರನ್ನವರ ಬಣದಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಮಣ್ಣ ಭದ್ರನ್ನವರ, ಉಪಾಧ್ಯಕ್ಷ ಸ್ಥಾನಕ್ಕೆ ಬಸವರಾಜ ಭದ್ರನ್ನವರ, ಆಶ್ರಯದಾತ ವರ್ಗಕ್ಕೆ ಪಂಡಿತಪ್ಪ ಹನಗಂಡಿ ಹಾಗು ರಾಜಶೇಖರ ಸೋರಗಾಂವಿ, ಪೋಷಕ ವರ್ಗದಿಂದ ಕಾಡಪ್ಪ ಹಳ್ಯಾಳ (ಮದಬಾವಿ), ಮಹಾಲಿಂಗಪ್ಪ ಕೆರೂರ, ಶ್ರೀಶೈಲ ಯಾದವಾಡ ಹಾಗು ಸಾಮಾನ್ಯ ವರ್ಗದಿಂದ ಗಂಗಾಧರ ಕೊಕಟನೂರ, ಪಂಡಿತ ಈಶ್ವರಪ್ಪ ಪಟ್ಟಣ, ಬಸವಂತಪ್ಪ ಜಾಡಗೌಡ, ಮಹಾದೇವ ಚರ್ಕಿ, ಡಾ. ವೀರಭದ್ರಪ್ಪ ಕುಳ್ಳಿ ಹಾಗು ಶಂಕರ ಜಾಲಿಗಿಡದ ಕಣದಲ್ಲಿದ್ದಾರೆ.

# ಆದ್ದೂರಿಯಿಂದ ಜರುಗಿದ ಅಂಬೇಡ್ಕರ್ ಜಯಂತಿ ಆಚರಣೆ



**ಸಿಹಿ ಕಹಿ ಸುದ್ದಿ,**

**ಕೋರವಾರ :** ದೇವರ ಹಿಪ್ಪರಗಿ ತಾಲ್ಲೂಕಿನ ಕೋರವಾರ ಗ್ರಾಮದಲ್ಲಿ ರಂದು ಡಾ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತೋತ್ಸವ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಿತು ಡಾ, ಬಾಬಾ ಸಾಹೇಬ್ ಅಂಬೇಡ್ಕರ್ ಪುತ್ತಳಿಗೆ ಸನ್ಮಾನ್ಯ ಶ್ರೀ ಶರಣಪ್ಪ ಸುಣುಗಾರ ಮಾಜಿ ಶಾಸಕರು ಸಿಂದಗಿ ಹಾಗೂ ಶ್ರೀನಾಥಗೌಡ.ಜಿ ಪಾಟೀಲ್ ಅಧ್ಯಕ್ಷರು ವಿನಾಯಕ ಕೋ ಆಪರೇಟಿವ್ ಸೊಸೈಟಿ ಕೋರವಾರ ನೆರವೇರಿಸಿದರು. ಮತ್ತು ಧ್ವಜಾರೋಹಣವನ್ನು ಸನ್ಮಾನ್ಯ ಶ್ರೀ ಶೇಖರಗೌಡ.ಬಿ ಪಾಟೀಲ್ ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ವಿಜಯಪುರ ಹಾಗೂ ಭೀಮನಗೌಡ.ಸಿ ಕುಳೇಕುಮಟಗಿ ಗ್ರಾಮ ಪಂಚಾಯತಿ ಸದಸ್ಯರು ನೆರವೇರಿಸಿದರು. ಸಸ್ಯ ನಡೆಸುವ ಮೂಲಕ ಕಾರ್ಯಕ್ರಮವನ್ನು ಶ್ಕಕ್ಬುಲ್ ಭಾಗವಾನ್ ಉದ್ದಿಮೆದಾರರು ದೇವರ ಹಿಪ್ಪರಗಿ ಇವರು ನೆರವೇರಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಷ.ಬ್ರ ಅಭಿನವ ಮುರುಘೇಂದ್ರ ಮಹಾ ಸ್ವಾಮಿಗಳು ಹಾಗೂ ಪೂಜ್ಯ ಬಂತೆ ಅಮರ ಜೊತೆ ತಾಲೂಕ ಇವರು ವಹಿಸಿ ಕೊಂಡು ಮಾತನಾಡಿದರು. ದೇವರ ಹಿಪ್ಪರಗಿ ಮತ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಭೀಮನಗೌಡ (ರಾಜುಗೌಡ) ಪಾಟೀಲ್ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮುಖಾಂತರ ಉದ್ಘಾಟನೆ ಮಾಡಿ ಬಾಬಾ ಸಾಹೇಬರು ಕುರಿತು ಮಾತನಾಡಿದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಪ್ರಭುಗೌಡ ಲಿಂಗದಳ್ಳಿ ಅವರು ಪ್ರಶಸ್ತಿ ಪ್ರಧಾನ ಮಾಡುವುದರ ಜೊತೆಗೆ ಬಾಬಾ ಸಾಹೇಬರು ಕುರಿತು ಮಾತನಾಡಿದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಆಯುಷ್ಮಾನ್ ವೈ ಸಿ ಮಯೂರ ಅವರು ನೆರವೇರಿಸಿ ಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತಿಯ ಅಧ್ಯಕ್ಷರ ಪ್ರತಿನಿಧಿಯಾದ ರಫಿಕ್ ಮೊಮೀನ್ ನವರು ವಹಿಸಿ ಕೊಂಡಿದ್ದರು. ಪ್ರಶಸ್ತಿ ಪ್ರಧಾನ ಸಮಿತಿಯ ಅಧ್ಯಕ್ಷರಾದ ಅರುಣ ಕೋರವಾರ ಕಾರ್ಯಕ್ರಮವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದರು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬಾಪುಗೌಡ ಬಿರಾದಾರ ಸಿದ್ದು ರಾಯಣ್ಣನವರ ಎ.ಎಚ್ ವಾಲಿಕಾರ್ ಸಂಗಮೇಶ ಛಾಯಾಗೋಳ ಮಹಮದ್ ರಫೀಕ್ ಮೊಮಿನ್ ಮಹಾಂತೇಶ ಸಿ ತಾಳಿಕೋಟಿ ದಯಾನಂದ ಗುತ್ತರ್ಗಿಮಠ ಚಂದ್ರಶೇಖರ್ ಕಡಕೋಳ್ಕರ ಕಾಶಿನಾಥ್ ತಳಕೇರಿ ಪ್ರಕಾಶ ಮಲ್ಲಾರಿ ದತ್ತಪ್ಪ ನಾಟಿಕಾರ ರಾಘವೇಂದ್ರ ರಾ ಗುಡಿಮನಿ ಜಾನು ಗುಡಿಮನಿ ರಾವುತ ಮಾಸ್ತರ ತಳಕೇರಿ ಸೋಮು ಬಡಿಗೇರ್ ಬಸವರಾಜ ನಾಟಿಕಾರ ಬಸವರಾಜ ಜಾಲವಾದಿ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು 42 ಶ್ರೇಷ್ಠ ಶಿಕ್ಷಕರಿಗೆ ವಿತರಿಸಲಾಯಿತು. ಹಾಗೆ ರಾಜ್ಯಮಟ್ಟದ ಸ್ಫೂರ್ತಿದಾಯಕ ವ್ಯಕ್ತಿ ಪ್ರಶಸ್ತಿಯನ್ನು 27 ಜನರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮತ್ತು ದೇವರ ಹಿಪ್ಪರಗಿ ತಾಲೂಕಿನ ಪತ್ರಿಕಾ ವರದಿಗಾರರಿಗೆ ಕೋರವಾರ ಗ್ರಾಮ ಪಂಚಾಯತಿಯ ಎಲ್ಲಾ ಪೌರ ಕಾರ್ಮಿಕರಿಗೆ ಹಾಗೂ ಊರಿನ ಹಿರಿಯರಿಗೆ ವಿಶೇಷ ಸನ್ಮಾನ ಮಾಡಲಾಯಿತು. ದೇವರ ಹಿಪ್ಪರಗಿ ತಾಲೂಕು ಡಿಎಸ್ಎಸ್ ಪದಾಧಿಕಾರಿಗಳು ಹಾಗೂ ಪಟ್ಟಣದ ಘಟಕದ ಎಲ್ಲಾ ಪದಾಧಿಕಾರಿಗಳು ದೇವರ ಹಿಪ್ಪರಗಿ ತಾಲೂಕಿನ ಅಲ್ಪ ಸಂಖ್ಯಾತರ ಘಟಕದ ಪದಾಧಿಕಾರಿಗಳು ದೇವರ ಹಿಪ್ಪರಗಿ ತಾಲೂಕಿನ ಗ್ರಾಮ ಘಟಕದ ಪದಾಧಿಕಾರಿಗಳು ಹಾಗೂ ಕೋರವಾರ ಗ್ರಾಮದ ಎಲ್ಲ ಊರಿನ ಹಿರಿಯರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಭಾಗವಹಿಸಿದರು. ಈ ಕಾರ್ಯಕ್ರಮದ ನಿರೂಪಣೆಯನ್ನು ರಮೇಶ ಕಲಕೇರಿ ಹಾಗೂ ಕಾರ್ಯಕ್ರಮದ ವಂದನಾರ್ಪಣೆ ಮಲ್ಲಿಕಾರ್ಜುನ ಮಸಬಿನಾಳ ನೆರವೇರಿಸಿ ಕೊಟ್ಟರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ.ಹಚ್ಯಾಳ.ದೇವರ ಹಿಪ್ಪರಗಿ**

# ಶೈಕ್ಷಣಿಕ ಅಭಿವೃದ್ಧಿ ಹಾಗೂ ಸ್ಪಂದನೆಗೆ ಎಸ್ಎಂಬಿ ಬಣ ಬೆಂಬಲಿಸಿ



**ಬನಹಟ್ಟಿ :** ನಗರದ ಜನತಾ ಶಿಕ್ಷಣ ಸಂಘದ ಚುನಾವಣೆಯಲ್ಲಿ 13 ಸ್ಥಾನಗಳಿಗೆ 26 ಸದಸ್ಯರು ಕಣದಲ್ಲಿದ್ದು, ಎರಡು ಬಣಗಳಿಂದ ಬಿರುಸಿನ ಚುನಾವಣೆ ನಡೆಯುತ್ತಿದೆ. 13 ಸ್ಥಾನಗಳಿಗೆ ಕೇವಲ 130 ಮತದಾರರಿದ್ದರೂ ಕಳೆದ ಮೂರು ದಿನಗಳಿಂದ ಪ್ರಚಾರದ ಆರ್ಭಟ ಮುಗಿಲು ಮುಟ್ಟಿದೆ. ರಬಕವಿ–ಬನಹಟ್ಟಿ ಅವಳಿ ನಗರಾದ್ಯಂತ ಜನತಾ ಶಿಕ್ಷಣ ಸಂಘದ ಚುನಾವಣೆಯ ಹವಾ ಬಲು ಜೋರಾಗಿದೆ.

ಸುಭಾಸ ಭದ್ರನ್ನವರ ಮಾತನಾಡಿ, ನಮ್ಮ ನೇತೃತ್ವದ ಬಣದಲ್ಲಿರುವ ಸದಸ್ಯರು ಈಗಾಗಲೇ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಅನುಭವವಿದೆ. ಪ್ರತಿಯೊಬ್ಬರೂ ಒಂದೊಂದು ಕ್ಷೇತ್ರದಲ್ಲಿ ತಮ್ಮದೇಯಾದ ಸಾಧನೆ ಮಾಡಿದ ವ್ಯಕ್ತಿಗಳಾಗಿದ್ದು, ಈ ಬಾರಿ ನಮ್ಮ ಬಣಕ್ಕೆ ಮತದಾರರು ಆಶೀರ್ವಾದ ನೀಡಲಿದ್ದಾರೆಂದರು.

ಆಡಳಿತದ ಅನುಭವ ಹೊಂದಿದ್ದರಿಂದ ನಿಜವಾಗಿಯೂ ಒಂದು ಶಿಕ್ಷಣ ಸಂಸ್ಥೆಗೆ ಪೂರಕವಾಗಲು ಶೇರುದಾರರ ವಿಸ್ತರಣೆ ಜೊತೆಗೆ ಹಲವಾರು ಯೋಜನೆಗಳು ಹಿಂದೆ ಬಿದ್ದಿವೆ. ಇವೆಲ್ಲವುಗಳಿಗೆ ಹಿರಿಯರ ಸ್ಪಂದನೆಯೊಂದಿಗೆ ಮುಂದಿನ ಅವಧಿಗೆ ಆಶೀರ್ವಾದ ಮಾಡಿದರೆ ಎಲ್ಲ ಬೇಡಿಕೆಗಳನ್ನು ಈಡೇರಿಸುವದಾಗಿ ಭದ್ರನ್ನವರ ವಿಶ್ವಾಸ ವ್ಯಕ್ತಪಡಿಸಿದರು.

ಈಗಾಗಲೇ ಪ್ರಚಾರ ಕೈಗೊಂಡಿದ್ದು, ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ ಎಂದು ಮಲ್ಲಿಕಾರ್ಜುನ ಬಾಣಕಾರ ತಿಳಿಸಿದರು.

ಎಸ್ಎಂಬಿ ಬಣದಲ್ಲಿನ ಅಧ್ಯಕ್ಷ ಸ್ಥಾನಕ್ಕೆ ಸುಭಾಸಚಂದ್ರ ಭದ್ರನ್ನವರ, ಉಪಾಧ್ಯಕ್ಷ ಸ್ಥಾನಕ್ಕೆ ಚನವೀರಪ್ಪ ಹಾದಿಮನಿ, ಆಶ್ರಯದಾತ ವರ್ಗದಿಂದ ಪ್ರಕಾಶ ಕಣಗೊಂಡ, ವಿಮಲಾ ರವೀಂದ್ರ ಧಬಾಡಿ, ಪೋಷಕ ವರ್ಗದಿಂದ ಅಶೋಕ ಕಾಡದೇವರ, ಜಯವಂತ ಗುಂಡಿ, ಮಹಾದೇವಿ ಶ್ರೀಶೈಲ ಕೊಳಕಿ, ಸಾಮಾನ್ಯ ವರ್ಗದಿಂದ ಡಾ. ಪಂಡಿತ ಪಟ್ಟಣ, ಭೀಮಶಿ ಮಗದುಮ್, ಮಲ್ಲಿಕಾರ್ಜುನ ಬಾಣಕಾರ, ರಾಜಶೇಖರ ಮಟ್ಟಿಕಲ್ಲಿ, ಶೇಖರ ಇಟ್ನಾಳ, ಸುಧೀರ ಹನಗಂಡಿ ಕಣದಲ್ಲಿದ್ದಾರೆ.

# ಯೋಜನೆಗಳ ಜಾರಿಗೆ ಸಿದ್ಧತೆ ಆರಂಭಿಸಿ



**ಧಾರವಾಡ :** ಕಳೆದ ಮೂರು ಕೆಡಿಪಿ ತ್ರೈಮಾಸಿಕ ಸಭೆಗಳಿಗೆ ಹೋಲಿಸಿದರೆ ಈ ವರ್ಷದ ಕೊನೆಯ ಕೆಡಿಪಿಯಲ್ಲಿ ವರದಿ ಮಂಡಿಸಿರುವ ಇಲಾಖೆಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯಲ್ಲಿ ಸಾಧನೆ ಆಗಿರುವುದು ತೃಪ್ತಿ ತಂದಿದೆ ಎಂದು ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷಎಸ್.ಲಾಡ್ ಅವರು ಹೇಳಿದರು.

ಅವರು ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜರುಗಿದ 2024-25 ನೇ ಸಾಲಿನ ಮಾರ್ಚ್-2025 ರ ಅಂತ್ಯಕ್ಕೆ ಕೊನೆಗೊಂಡ 4ನೇ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಇಂದಿನ ಸಭೆಯಲ್ಲಿ ಇಲಾಖಾವಾರು ಅನುದಾನ ಬಿಡುಗಡೆ ಬಳಕೆ ಮತ್ತು ಭೌತಿಕ ಗುರಿ ಸಾಧನೆಯನ್ನು ಪರಿಶೀಲಿಸಲಾಯಿತು. ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಪ್ರಸಕ್ತ ವರ್ಷದ ಕ್ರಿಯಾಯೋಜನೆಯನ್ನು ಈಗಿನಿಂದಲೇ ಪರಿಶೀಲಿಸಿ, ಅನುಮೊದಿಸಲು ಸಂಬಂಧಿಸಿದ ಇಲಾಖೆ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಮಳೆಗಾಲ ಆರಂಭವಾಗುವದರಿಂದ ಸಾಂಕ್ರಾಮಿಕ ರೋಗ, ಕುಡಿಯುವ ನೀರಿನ ಸ್ವಚ್ಛತೆ ಬಗ್ಗೆ ಆರೋಗ್ಯ ಇಲಾಖೆ ಮುಂಜಾಗ್ರತೆವಹಿಸಬೇಕು. ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಲ್ಲಿ ತಕ್ಷಣ ಪರಿಹರಿಸಬೇಕು ಎಂದು ತಾಲೂಕು ಪಂಚಾಯತ ಇಓ ಅವರಿಗೆ ಸಚಿವರು ಆದೇಶಿಸಿದರು.

ನರೇಗಾ ಯೋಜನೆ ಉತ್ತಮವಾಗಿ ಅನುಷ್ಠಾನಗೊಳಿಸಬೇಕು. ಕೃಷಿ, ಪಂಚಾಯತ ರಾಜ್, ತೋಟಗಾರಿಕೆ, ಅರಣ್ಯ ಸೇರಿದಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ಜರುಗಿಸಿ, ಮಾನವದಿನಗಳಗರಿಷ್ಠಬಳಕೆಹಾಗೂಹೆಚ್ಚು ಅನುದಾನಬಳಕೆಗೆಕ್ರಮವಹಿಸಲಾಗುವುದು. ಹೊಸ ವಿಚಾರಗಳೊಂದಿಗೆ ಅಧಿಕಾರಿಗಳು ಭಾಗವಹಿಸಬೇಕೆಂದು ಸಚಿವ ಸಂತೋಷ ಲಾಡ್ ಅವರು ಹೇಳಿದರು.

ಕೃಷಿ, ಮೀನುಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಉತ್ತಮವಾಗಿ ಸರಕಾರಿ ಯೋಜನೆಗಳನ್ನು ಜಾರಿಗೊಳಿಸಿದ್ದು, ಅವುಗಳಿಗೆ ಹೆಚ್ಚು ಪ್ರಚಾರ ನೀಡುವ ಮೂಲಕ ರೈತರಿಗೆ ಪರಿಚಯಿಸಬೇಕು ಎಂದು ಹೇಳಿದರು.

ಗೈರಾದ ಅಧಿಕಾರಿ ಅಮಾನತ್ತು: ಸಣ್ಣ ನೀರಾವರಿ ಇಲಾಖೆ ಕಾರ್ಯಪಾಲಕ ಅಭಿಯಂತರ ದೇವರಾಜ ಶಿಗ್ಗಾಂವಿ ಅವರು ಅನುಮತಿ ಪಡೆಯದೆ ಇಂದಿನ ಕೆಡಿಪಿ ಸಭೆಗೆ ಗೈರಾಗಿದ್ದರು ಮತ್ತು ಅವರ ಇಲಾಖೆಯ ಪ್ರಗತಿ ತೃಪ್ತಿಕರವಾಗಿರಲಿಲ್ಲ ಎಂದು ತಿಳಿದು ಜಿಲ್ಲಾ ಉಸ್ತುವಾರಿ ಸಚಿವರು ಅಮಾನತ್ತು ಗೊಳಿಸಿ, ಶಿಸ್ತುಕ್ರಮ ಜರುಗಿಸಲು ಸಭೆಯಲ್ಲಿ ಆದೇಶಿಸಿದರು.

ಸಭೆಯಲ್ಲಿ ಶಾಸಕರಾದ ಎನ್.ಎಚ್. ಕೋನರಡ್ಡಿ, ಮಹೇಶ ಟೆಂಗಿನಕಾಯಿ, ಜಿಲ್ಲಾಧಿಕಾರಿ ದಿವ್ಯ ಪ್ರಭು, ಮಹಾನಗರ ಪೊಲೀಸ್ಆಯುಕ್ತಎನ್.ಶಶಿಕುಮಾರ,ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಗೋಪಾಲ ಬ್ಯಾಕೋಡ,ಹೆಸ್ಕಾಂವ್ಯವಸ್ಥಾಪಕನಿರ್ದೇಶಕಿ ವೈಶಾಲಿ, ಮಹಾನಗರ ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ ಸೇರಿದಂತೆ ಇತರರು ಮಾತನಾಡಿದರು.

ಸಭೆಯಲ್ಲಿ ಸಚಿವರು, ಕೃಷಿ, ತೋಟಗಾರಿಕೆ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ, ಲೋಕೋಪಯೋಗಿ, ಹೆಸ್ಕಾಂ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಆರೋಗ್ಯ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಮಾಡಿ, ಅಧಿಕಾರಿಗಳಿಂದ ವರದಿ ಪಡೆದರು.

ತಹಶೀಲ್ದಾರ ಮಜ್ಜಗಿ ಅವರಿಗೆ ಸನ್ಮಾನ: 2023 ನೇ ಸಾಲಿನ ರಾಜ್ಯ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಬಾಜನರಾಗಿ ಪ್ರಶಸ್ತಿ ಪುರಸ್ಕೃತರಾದ ಹುಬ್ಬಳ್ಳಿ ತಹಶೀಲ್ದಾರ ಜೆ.ಬಿ.ಮಜ್ಜಗಿ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ್ ಅವರು ಕೆಡಿಪಿ ಸಭೆ ಆರಂಭದ ಪೂರ್ವದಲ್ಲಿ ಸನ್ಮಾನಿಸಿ, ಗೌರವಿಸಿದರು.

ಗ್ರಂಥಾಲಯಗಳಿಗೆ ಕಂಪ್ಯೂಟರ್ ವಿತರಣೆ: ಜಿಲ್ಲಾ ಪಂಚಾಯತಿಯಿಂದ ಅರಿವು ಯೋಜನೆಯಡಿ ಜಿಲ್ಲೆಯ 84 ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ಕಂಪ್ಯೂಟರ್‌ಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ಇಂದು ಬೆಳಿಗ್ಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ವಿತರಿಸಿದರು.

ಸಭೆಯಲ್ಲಿ ಜಿಲ್ಲಾ ಕೆಡಿಪಿ ಸಭೆಯ ನಾಮ ನಿರ್ದೇಶಿತ ಸದಸ್ಯರು, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಬಿ.ಎಸ್.ಮೂಗನೂರಮಠ ಸ್ವಾಗತಿಸಿ, ಸಭೆ ನಿರ್ವಹಿಸಿದರು. ಮುಖ್ಯಯೋಜನಾಧಿಕಾರಿ ದೀಪಕ ಮಡಿವಾಳರ ವಂದಿಸಿದರು.

# ಬಾಲಕಿ ಹತ್ಯೆ ಪ್ರಕರಣ: ಸಿಐಡಿ ಎಡಿಜಿಪಿ ಭೇಟಿ



**ಹುಬ್ಬಳ್ಳಿ:** ಇತ್ತೀಚೆಗೆನಗರದಲ್ಲಿನಡೆದಿದ್ದಐದುವರ್ಷದ ಬಾಲಕಿಯ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಎಡಿಜಿಪಿ ಬಿ.ಕೆ. ಸಿಂಗ್ ಅವರು ನಗರಕ್ಕೆ ಭೇಟಿ ನೀಡಿದ್ದು, ಪ್ರಕರಣ ಸಂಬಂಧ ಕೆಲ ಮಾಹಿತಿಗಳನ್ನು ಕಲೆ ಹಾಕಿದರೆಂದು ತಿಳಿದುಬಂದಿದೆ.

ಬಾಲಕಿ ಹತ್ಯೆ ಆರೋಪಿ ರಿತೇಶ್‌ಕುಮಾರ್ ಪೊಲೀಸರ ಗುಂಡೇಟಿನಿಂದ ಮೃತಪಟ್ಟಿದ್ದ. ತದನಂತರ ಸಿಐಡಿ ಅಧಿಕಾರಿಗಳಿಂದ ತನಿಖೆ ನಡೆದಿತ್ತು.

ಕೆಲ ದಿನಗಳ ಹಿಂದೆ ಸಿಐಡಿ ಅಧಿಕಾರಿಗಳು ನಗರಕ್ಕೆ ಆಗಮಿಸಿ ವಿವಿಧ ಸ್ಥಳಗಳಿಗೆ ಭೇಟಿ ನಿಡಿ ಮಾಹಿತಿ ಕಲೆ ಹಾಕಿದ್ದರು.

ಪ್ರಕರಣ ಸಂಬಂಧ ಇಂದು ಸಿಐಡಿ ಎಡಿಜಿಪಿ ಅವರು ಘಟನೆಗೆ ಸಂಬಂಧಿಸಿದ ಸ್ಥಳಗಳಿಗೆ ಭೇಟಿ ನಿಡಿ, ಪರಿಶೀಲನೆ ನಡೆಸಿ ಮಾಹಿತಿ ಕಲೆ ಹಾಕಿದರು.

ಆರೋಪಿಯ ಪೋಷಕರು ಇನ್ನೂ ಪತ್ತೆಯಾಗದ ಕಾರಣ ಅವರ ಪತ್ತೆ ಕಾರ್ಯ ಚುರುಕುಗೊಂಡಿದೆ. ವಿಚಾರಣೆ ವೇಳೆ ಆರೋಪಿ ಬಿಹಾರದವನೆಂದು ಹೇಳಿದ್ದು, ಅಲ್ಲಿಯೂ ಪತ್ತೆ ಕಾರ್ಯ ನಡೆದಿದೆ.

ನಗರದ ವಿಜಯನಗರ ಬಡಾವಣೆಯಲ್ಲಿ ಕಳೆದ ಏ. 13 ರಂದು ಐದು ವರ್ಷದ ಬಾಲಕಿಯನ್ನು ಆರೋಪಿ ರಿತೇಶ್‌ಕುಮಾರ ಕರೆದುಕೊಂಡು ಹೋಗಿ, ಕೊಲೆಗೈದಿದ್ದ ಎಂಬ ಆರೋಪದ ಮೇಲೆ ಆರೋಪಿಯನ್ನು ಬಂಧಿಸಲಾಗಿತ್ತು. ಸ್ಥಳ ಮಹಜರಿಗೆ ಆರೋಪಿ ರಿತೇಶ್‌ಕುಮಾರನನ್ನು ಕರೆದುಕೊಂಡು ಹೋದ ಸಂದರ್ಭದಲ್ಲಿ ಪೊಲೀಸರ ಮೇಲೆ ಹಲ್ಲೆ ಮಾಡಿ ತಪ್ಪಿಸಿಕೊಂಡು ಹೋಗಲು ಮುಂದಾಗಿದ್ದನು. ಈ ವೇಳೆ ಆರೋಪಿ ಮೇಲೆ ಪೊಲೀಸರು ಗುಂಡು ಹಾರಿಸಿದ್ದರು. ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟರಲ್ಲಿ ಆತನ ಉಸಿರು ನಿಂತಿತ್ತು.

# ವೀರಶೈವ ಲಿಂಗಾಯತ ಸಮುದಾಯ ಭವನಕ್ಕೆ ವಿದ್ಯುಕ್ತವಾಗಿ ಆರಂಭ



**ನವಲಗುಂದ :** ಮಾಜಿ ಸಚಿವ ಶಂಕರ ಪಾಟೀಲಮುನೇನಕೊಪ್ಪ ಅವರ ತೀವ್ರ ಆಸಕ್ತಿಯಿಂದ ಆರಂಭಗೊಂಡಿದ್ದ ವೀರಶೈವ ಲಿಂಗಾಯತ ಸಮುದಾಯ ಭವನ ಇಂದು ವಿದ್ಯುಕ್ತವಾಗಿ ಆರಂಭಗೊಂಡಿದ್ದು, ಸಮಾಜದ ಬಹುದಿನದ ಕನಸು ಈಡೇರಿದಂತಾಗಿದೆ ಎಂದು ಗವಿಮಠದ ಬಸವಲಿಂಗ ಸ್ವಾಮೀಜಿ ನುಡಿದರು.

ಅವರು ಪಟ್ಟಣದ ಬಸ್ ಡಿಪೊ ಪಕ್ಕದಲ್ಲಿ ನವಲಗುಂದ ನಗರದಲ್ಲಿ ವೀರಶೈವ ಲಿಂಗಾಯತ ಸೇವಾ ಸಂಸ್ಥೆಯಿಂದ ನಿರ್ಮಾಣಗೊಂಡ ವೀರಶೈವ ಲಿಂಗಾಯತ ಸಮುದಾಯ ಭವನದಲ್ಲಿ ವಿಶೇಷ ಪೂಜೆ ನೆರವೇರಿಸುವ ಮೂಲಕ ಆಶೀರ್ವಾಚನ ನೀಡಿದರು. ಪಂಚಗೃಹ ಹಿರೇಮಠದ ಶಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು. ಮಾಜಿ ಶಾಸಕ ಡಾ. ಆರ್ ಬಿ ಶಿರಿಯಣ್ಣವರ ಮಾತನಾಡಿ ಸಮುದಾಯ ಭವನ ಕಾಮಗಾರಿ ನಡೆಯುತ್ತಿದ್ದಾಗ ಕೆಲವು ರೂಪುರೇಷೆ ಬದಲಾದ ಪರಿಣಾಮ ಸಮಾಜದ ವತಿಯಿಂದ 60 ಲಕ್ಷ ರೂಪಾಯಿ ದೇಣಿಗೆ ಸಂಗ್ರಹವಾಗಿತ್ತು. ಆಗ ಮತ್ತೆ ತಮ್ಮ ಕುಟುಂಬದ ಪರವಾಗಿ ಮಾಜಿ ಸಚಿವ ಶಂಕರ ಪಾಟೀಲಮುನೇನಕೊಪ್ಪ ಅವರು 20 ಲಕ್ಷ ರೂಪಾಯಿ ಹಣವನ್ನ ದೇಣಿಗೆ ನೀಡಿದ್ದಾರೆ ಎಂದರು.

ಮಾಜಿಸಚಿವಶಂಕರಪಾಟೀಲಮುನೇನಕೊಪ್ಪ ಮಾತನಾಡಿ ನವಲಗುಂದ ಕ್ಷೇತ್ರದ ವೀರಶೈವ ಲಿಂಗಾಯತ ಸಮುದಾಯದ ಪ್ರತಿಯೊಬ್ಬರೂ ಹೆಮ್ಮೆ ಪಡುವಂತ ಕಲ್ಯಾಣ ಮಂಟಪ ಎದ್ದು ನಿಂತಿದೆ. ಸಮಾಜ ಭಾಂದವರು ಇದರ ಸದುಪಯೋಗ ಪಡೆದುಕೊಳ್ಳಬೇಕು ಇನ್ನೂ ಇದರ ಪಕ್ಕದಲ್ಲಿ ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಸ್ಟೆಲ್ ನಿರ್ಮಾಣ ಕಾಮಗಾರಿಯು ವೇಗವಾಗಿ ನಡೆಯುತ್ತಿದೆ ಎಂದರು. ಇದೆ ವೇಳೆ ಸನ್ಮಾನ ಕಾರ್ಯಕ್ರಮ ಜರುಗಿತು

ವಿಜಯ ಕುಲಕರ್ಣಿ, ಅಂದಾನಯ್ಯ ಹಿರೇಮಠ, ಗಂಗಪ್ಪ ಮನಮಿ, ಅಶೋಕ ಮರಕುಂಬಿ, ಶಂಕ್ರಗೌಡ ಬಾಳನಗೌಡ್ರ, ಸದುಗೌಡಪಾಟೀಲ,ಶ್ರೀಶೈಲ್‌ಮೂಲಿಮನಿ, ಎಲ್.ಬಿ.ಪಾಟೀಲ, ಎಸ್ ವಿ ಮುದಿಗೌಡ್ರ, ಸಂತೋಷ ನಾವಳ್ಳಿ, ಈರಣ್ಣ ಚವಡಿ, ಮಲ್ಲಿಕಾರ್ಜುನ ಸಂಗನಗೌಡ್ರ, ಶಂಕ್ರು ತೋಟದ, ದೇವರಾಜ ಕರಿಯಪ್ಪಣವರ, ಸಿದ್ದಲಿಂಗಪ್ಪ ಮದ್ನೂರ, ಸಿದ್ಧಣ್ಣ ಕೆಟಗೇರಿ, ಅಣ್ಣಪ್ಪ ಬಾಗಿ, ಮಲ್ಲನಗೌಡ ರಾಟಮನಿ, ಗುರಪ್ಪ ಅವರಾದಿ, ಮಂಜು ಅಕ್ಕಿ,ಸಿದ್ಧಪ್ಪ ಜನ್ನರ, ಮಹದೇವಗೌಡ ಬಾಳನಗೌಡ್ರ, ಶರಣಪ್ಪಗೌಡ ದಾನಪ್ಪಗೌಡ್ರ, ಎಸ್.ಎಮ್. ಕಾಲವಾಡ, ಅಣ್ಣಪ್ಪ ಬಾಗಿ ಸೇರಿದಂತೆ ಸಮಾಜ ಬಾಂದವರು ಉಪಸ್ಥಿತರಿದ್ದರು.

# ರಾಜ್ಯ ಸರಕಾರಿ ನೌಕರರ ದಿನ ಆಚರಣೆ



**ನವಲಗುಂದ:** "ಸರ್ಕಾರಿನೌಕರರುಕೇವಲಸೇವಕರಲ್ಲ, ಸಮಾಜ ಸೇವೆ ಮಾಡಲು ಸಿಕ್ಕಿರುವ ಅವಕಾಶ ಎಂದು ನೌಕರರ ತಾಲ್ಲೂಕು ಸಂಘದ ಕಾರ್ಯದರ್ಶಿ ಎಲ್ ವಾಯ್ ರಾಯಪ್ಪನವರ ಹೇಳಿದರು.

ಅವರು ಸೋಮವಾರ ಪಟ್ಟಣದ ಕರ್ನಾಟಕ ರಾಜ್ಯ ಸರಕಾರಿ ನೌಕರರ ಭವನದಲ್ಲಿ ಕರ್ನಾಟಕ ರಾಜ್ಯ ಸರಕಾರಿ ನೌಕರರ ದಿನಾಚರಣೆ ಅಂಗವಾಗಿ ಸಂಘದ ಸಂಸ್ಥಾಪಕಅಧ್ಯಕ್ಷರಾದದಿ.ಶ್ರೀಮತಿಮೇರಿದೇವಾಸಿಯ ರವರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಜಯಂತಿ ಆಚರಿಸಿ ಮಾತನಾಡಿದರು. ಖಜಾಂಚಿ ಎನ್ ವಾಯ್ ಕಳಸಾಪುರ ಪರಿಷತ್ ಸದಸ್ಯರಾದ ಸಹದೇವ ಪೂಜಾರ, ನಿರ್ದೇಶಕರಾದ ಶಿದ್ದು ಬೋರಕ್ಕನವರ, ಬಸವರಾಜ ಹೂಗಾರ, ಮಹಮ್ಮದ ಮುಜಾವರ ಶಿಕ್ಷಕರಾದ ಎನ್ ಎನ್ ಹಾಲಿಗೇರಿ, ಆರ್ ಎಸ್ ಕಲ್ಲೂರ ಸೇರಿದಂತೆ ಸಂಘದ ಪದಾಧಿಕಾರಿಗಳು ಇದ್ದರು

# ಪ್ರತಿ ಜಿಲ್ಲೆಯಲ್ಲಿ ಮಲ್ಟಿ ಸ್ಕೀಲಿಂಗ್ ಸೆಂಟರ್ ಸ್ಥಾಪನೆ



**ಹುಬ್ಬಳ್ಳಿ :** ಪ್ರತಿ ಜಿಲ್ಲೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಸೆಂಟರ್ ಹಾಗೂ ಕ್ಯಾನ್ಸರ್ ಸೆಂಟರ್ ಸ್ಥಾಪನೆ ಮಾಡಲು ಯೋಜನೆ ಹಾಕಿಕೊಳ್ಳಲಾಗಿದೆ. ಮೂರು ವರ್ಷದಲ್ಲಿ ಸ್ಥಾಪನೆ ಮಾಡುವ ಗುರಿ ಹೊಂದಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ಕೆಎಂಸಿಆರ್‌ಐನ ಗೋಲ್ಡನ್ ಜುಬ್ಲಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಮೈಸೂರು, ಕೊಪ್ಪಳ ಹಾಗೂ ಕಲ್ಬುರ್ಗಿ ಜಿಲ್ಲೆಯ ಸ್ಥಾಪಿಸಲಾಗಿರುವ ಮಲ್ಟಿ ಸ್ಕೀಲಿಂಗ್ ಸೆಂಟರ್ ನಂತೆ ಪ್ರತಿ ಜಿಲ್ಲೆಯಲ್ಲಿ ಮಲ್ಟಿ ಸ್ಕೀಲಿಂಗ್ ಸೆಂಟರ್ ಸ್ಥಾಪನೆ ಮಾಡಲಾಗುವುದು. ಈಗಾಗಲೇ ಹಲವು ಜಿಲ್ಲೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಮುಂದಿನ ಒಂದು ವರ್ಷದಲ್ಲಿ ಜಯದೇವ ಆಸ್ಪತ್ರೆ ನಿರ್ಮಿಸಲಾಗುವುದು.ಮುಂದಿನದಿನಗಳಲ್ಲಿ ಹುಬ್ಬಳ್ಳಿಅಥವಾಬೆಳಗಾವಿಯಲ್ಲಿಉದ್ಯೋಗ ಮೇಳ ಆಯೋಜನೆ ಮಾಡಲಾಗುವುದು. ಕಲಿಕೆ ಜೊತೆ ಕೌಶಲ್ಯ ಯೋಜನೆಯನ್ನು ಜಾರಿಗೆ ತರಲಾಗಿದೆ. 800 ಪದವಿ ಹಾಗೂ 750 ಸ್ನಾತಕೋತ್ತರ ಪದವಿ ಮೆಡಿಕಲ್ ಸೀಟ್ ನೀಡುವಂತೆ ರಾಷ್ಟ್ರೀಯ ಮೆಡಿಕಲ್ ಆಯೋಗಕ್ಕೆ ಮನವಿ ಮಾಡಲಾಗಿದೆ. ಬಜೆಟ್ ನಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಿನ ಅನುದಾನ ಒದಗಿಸಲಾಗಿದೆ ಎಂದರು.

ಬೆಂಗಳೂರು ಹೊರತು ಪಡಿಸಿದರೆ ಹುಬ್ಬಳ್ಳಿಯ ಕೆಎಂಸಿಆರ್‌ಐನಲ್ಲಿ ಹೆಚ್ಚಿನ ಜನರು ಚಿಕಿತ್ಸೆ ಪಡೆಯುತ್ತಾರೆ. ಕೆಎಂಸಿಆರ್‌ಐನಲ್ಲಿ ಕಿತ್ತೂರುಕರ್ನಾಟಕಭಾಗದಜನರಿಗೆಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ. ಗುಣಮಟ್ಟದ ಔಷಧಿಗಳನ್ನು ಜನರಿಗೆ ಒದಗಿಸುವುದು ಸರ್ಕಾರದ ಮೂಲ ಉದ್ದೇಶವಾಗಿದೆ. ಆ ನಿಟ್ಟಿನಲ್ಲಿ ಔಷಧಿಗಳ ಕೊರತೆ ಆಗದಂತೆ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಬಿಪಿಎಲ್ ಕಾರ್ಡ್ ಹೊಂದಿದವರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಎರಡು ವರ್ಷದಲ್ಲಿ 35 ಕಿಡ್ನಿ ಟ್ರಾನ್ಸಪ್ಲಾಂಟ್ ಮಾಡಲಾಗಿದೆ. ಅಲ್ಲದೇ ಸ್ಕಿನ್ ಬ್ಯಾಂಕ್ ಸ್ಥಾಪನೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಸುಮಾರು ರೂ.6 ಕೋಟಿ ವೆಚ್ಚದಲ್ಲಿ ಆಡಿಟೋರಿಯಂ ನಿರ್ಮಿಸಲಾಗಿದೆ. ಸುಮಾರು 25 ಲಕ್ಷ ವೆಚ್ಚದಲ್ಲಿ ಜೀವಾಮೃತ ತಾಯಿ ಹಾಲು ಭಂಡಾರ ತೆರೆಯಲಾಗಿದೆ. ರೂ.90 ಲಕ್ಷದಲ್ಲಿ 300 ಆಸನವುಳ್ಳ ಮಲ್ಟಿ ಫಂಕ್ಷನ ಹಾಲ್ ಸ್ಥಾಪಿಸಲಾಗಿದೆ. ಕೃತಕ ಕಾಲು ಜೋಡಣೆ ಚಿಕಿತ್ಸಾ ಘಟಕ ತೆರೆಯಲಾಗಿದೆ. ನರ್ಸಿಂಗ್ ಕಾಲೇಜ್ ಸಾಂಸ್ಕೃತಿಕ ಸಭಾಂಗಣವನ್ನು ರೂ.75 ಲಕ್ಷ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ರೂ.5 ಕೋಟಿ ಮೊತ್ತದಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಸತಿ ನಿಲಯಗಳ ನವೀಕರಣ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ರೂ.5 ಕೋಟಿ ವೆಚ್ಚದಲ್ಲಿ ಅಗ್ನಿ ಅವಘಡ ಸುರಕ್ಷತಾ ವ್ಯವಸ್ಥೆ ಅಳವಡಿಸಲಾಗುತ್ತಿದೆ. ರೂ.25 ಮೊತ್ತದಲ್ಲಿ ಹೊರರೋಗಿ ವಿಭಾಗದಲ್ಲಿ ನೋಂದಣಿ ಹೆಚ್ಚುವರಿ ಕೌಂಟರ್‌ಗಳ ಸ್ಥಾಪನೆ ಮಾಡಲಾಗುವುದು. ರೂ. 60 ಲಕ್ಷ ವೆಚ್ಚದಲ್ಲಿ ಹೊಸ ಮೂರು ಲಿಫ್ಟಗಳ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಮುಖ್ಯ ಔಷಧಿ ಮಳಿಗೆ ಕಟ್ಟಡ ವಿಸ್ತರಣೆ ಹಾಗೂ ದುರಸ್ತಿ ಕಾಮಗಾರಿಯನ್ನು ರೂ.90 ಲಕ್ಷ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಲಿಂಗರಾಜ್ ಪಾಟೀಲ್ ಅವರ ದೇಣಿಗೆ ಹಣ ರೂ.1.17 ಕೋಟಿ ವೆಚ್ಚದಲ್ಲಿ ಕೃತಕ ಗರ್ಭಧಾರಣೆ ಕೇಂದ್ರವನ್ನು ತೆರೆಯಲಾಗುತ್ತಿದೆ. ರೂ.8.97 ಕೋಟಿ ವೆಚ್ಚದಲ್ಲಿ ಪಾರ್ಶ್ವವಾಯು ರೋಗಿಗಳ ಶುಶ್ರೂಷ ಘಟಕ ಸ್ಥಾಪಿಸಲಾಗುವುದು. ರೂ. 24 ಕೋಟಿ ವೆಚ್ಚದಲ್ಲಿ ತುರ್ತು ನಿಗಾ ಘಟಕವನ್ನು ತೆರೆಲಾಗುವುದು. ರೂ.25 ಕೋಟಿ ಬಿಎಸ್‌ಎಲ್ ಲ್ಯಾಬ್ ತೆರೆಯಲು ಕೇಂದ್ರ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಅಧ್ಯಕ್ಷರಾದ ಸೈಯದ್ ಅಜೀಮಪೀರ್ ಎಸ್.ಖಾದ್ರಿ, ಕೆಎಂಸಿಆರ್‌ಐನ ನಿರ್ದೇಶಕರಾದ ಡಾ.ಎಸ್.ಎಫ್. ಕಮ್ಮಾರ, ವೈದ್ಯಕೀಯ ಅಧೀಕ್ಷಕರಾದ ಡಾ.ಈಶ್ವರ ಹಸಬಿ, ಪಿಎಂಎಸ್‌ಎಸ್ವೈ ಸೂಪರಿಂಟೆಂಡೆಂಟ್ ರಾಜಶೇಖರ, ಪ್ರಾಚಾರ್ಯ ಗುರುಶಾಂತಪ್ಪ ಯಲಗಚ್ಚಿನ, ಡಾ.ರಾಜಶೇಖರ ದ್ಯಾಬೇರಿ ಇತರರು ಉಪಸ್ಥಿತರಿದ್ದರು.

# ತಂಬಾಕು ಮಾರಾಟ ಅಂಗಡಿಗಳ ಮೇಲೆ ದಾಳಿ: ದುಷ್ಪರೀಣಾಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು




**ಬೆಳಗಾವಿ:** ಜಿಲ್ಲಾತಂಬಾಕುನಿಯಂತ್ರಣಕೋಶಹಾಗೂ ಪೊಲೀಸ ಇಲಾಖೆಯ ಸಹಯೋಗದೊಂದಿಗೆ ಜಿಲ್ಲೆಯ ಅಜಮನಗರನ ತಂಬಾಕು ಮಾರಾಟ ಅಂಗಡಿಗಳ ಮೇಲೆ ದಾಳಿ ಹಮ್ಮಿಕೊಳ್ಳಲಾಯಿತು.

ಜಿಲ್ಲಾ ತಂಬಾಕು ನಿಯಂತ್ರಣಾಧಿಕಾಗಳ ಮಾರ್ಗದರ್ಶನದನ್ವಯ ದಾಳಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವ ಮತ್ತು ನೇರ ಪರೋಕ್ಷವಾಗಿ ತಂಬಾಕು ಜಾಹಿರಾತು ಪ್ರದರ್ಶನ, ಶೈಕ್ಷಣಿಕ ಆವರಣದ 100 ಮೀಟರ ಅಂತರದೊಳಗೆ ತಂಬಾಕು ಉತ್ಪನ್ನ ಮಾರಾಟ ಮಾಡುವ ಅಂಗಡಿ ಮಾಲಿಕರಿಗೆ, ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ ಹಾಗೂ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳನ್ನು ತಿಳಿಸಲಾಯಿತು.

ಕೋಟ್ಪಾ-2003 ಕಾಯ್ದೆ ಅಡಿಯಲ್ಲಿ ಒಟ್ಟು 28 ಪ್ರಕರಣಗಳನ್ನು ದಾಖಲಿಸಿ ದಂಡ ವಿಧಿಸಲಾಯಿತು ಸೆಕ್ಷನ್-4 ನಾಮಫಲಕವನ್ನು ವಿತರಿಸಲಾಯಿತು. ಸಾರ್ವಜನಿಕರಲ್ಲಿ ತಂಬಾಕು ಸೇವನೆಯ ದುಷ್ಪರೀಣಾಮದಕುರಿತುಅರಿವುಮೂಡಿಸಲಾಯಿತು. ಸದರಿ ದಾಳಿಯಲ್ಲಿ ತಂಬಾಕು ನಿಯಂತ್ರಣ ಕೋಶ ಜಿಲ್ಲಾ ಸಲಹೆಗಾರರಾದ ಡಾ.ಶ್ವೇತಾ ಪಾಟೀಲ, ಹಾಗೂ ಸಮಾಜ ಕಾರ್ಯಕರ್ತೆ ಕವಿತಾ ರಾಜನ್ನವರ, ಪೊಲೀಸ್ ಇಲಾಖೆಯ ಎಮ್.ಐ. ಹಣಬರ ಪಾಲ್ಗೊಂಡಿದ್ದರು ಎಂದು ಜಿಲ್ಲಾ ಸಮೀಕ್ಷಾ/ತಂಬಾಕು ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುದ್ನೇಶ್ವರ ಸ್ವಾಮಿಗಳ ಪುಣ್ಯಸ್ಮರಣೋತ್ಸವ



**ಅಣ್ಣಿಗೇರಿ :** ಗುದ್ನೇಶ್ವರ ಸ್ವಾಮಿಗಳ 50 ನೇ ಪುಣ್ಯ ಸ್ಮರಣೋತ್ಸವ ಮತ್ತು ಸುವರ್ಣ ಸಂಭ್ರಮ ಕಾರ್ಯಕ್ರಮ ಸಸಿಗೆ ನೀರು ಹಾಕುವ ಮೂಲಕ ಆರಂಭವಾಯಿತು.

ನಿಂಗಮ್ಮ ಎಸ್ ಹೂಗಾರ ವಿದ್ಯಾ ಸಂಸ್ಥೆ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗುದ್ನೇಶ್ವರ ಮಠದ ಶ್ರೀ ಪ್ರಭುಲಿಂಗ ಸ್ವಾಮೀಜಿ ಮಾತನಾಡಿದರು.

ಸಾನಿಧ್ಯ ಶ್ರೀ ಮ, ನಿ, ಪ್ರ ಬಸವಲಿಂಗ ಮಹಾಸ್ವಾಮಿಗಳು, ಡಾ, ಶಿವಕುಮಾರ ಸ್ವಾಮೀಜಿ ದಾಸೋಹಮಠ ಅಣ್ಣಿಗೇರಿ, ಶ್ರೀ ಮ ನಿ ಪ್ರ ಪಂಚಾಕ್ಷರ ಸ್ವಾಮೀಜಿ ಮತ್ತು ಡಾ, ಎ ಸಿ ವಾಲಿ ಮಹಾರಾಜರು ವಹಿಸಿದ್ದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಎನ್. ಎಚ್. ಕೋನರಡ್ಡಿ ಮಾತನಾಡಿ ನನ್ನ ಕ್ಷೇತ್ರದಲ್ಲಿ ಇಂಥ ಪುಣ್ಯಕ್ಷೇತ್ರ ಅಣ್ಣಿಗೇರಿ ಒಂದಲ್ಲ ಒಂದು ಧಾರ್ಮಿಕ ಪ್ರವಚನ ನಡೆಯುತ್ತಿದೆ, ನಡೆಯುತ್ತಿರುತ್ತವೆ ಎಂದು ಹೇಳಿದರು.

ಕಾರ್ಯಕ್ರಮ ಅಧ್ಯಕ್ಷತೆ ರೈತ ಮುಖಂಡರು, ಭಗವಂತಪ್ಪ ಪುಟ್ಟಣ್ಣವರ ಮಾತನಾಡಿದರು. ಈ ಸಂದರ್ಭದಲ್ಲಿ ಶಿವಣ್ಣ ಬಾಳೋಜಿ, ಬಿ. ಎ. ಬಂದೋಜಿ, ನಿಜಲಿಂಗಪ್ಪ ಅಕ್ಕಿ, ಶಿವಶಂಕರ ಕಲ್ಲೂರ, ವಿರೇಶ್ ಶಾನಬೋಗರ, ಶಿವಯೋಗಿ ಸುರಕೋಡ, ನಿಂಗಪ್ಪ ಬಡ್ಡಪ್ಪನವರ, ನಾಗರಾಜ ಯಣ್ಣೆ, ನಾಗಲಿಂಗಪ ದಳವಾಯಿ, ವಿರೇಶ, ಕುಬಸದ, ಅರ್ಜುನ್ ಕಲಾಲ, ಉಮೇಶ ಬಿಲಹಣವರ, ಪುರಸಭೆ ಸದಸ್ಯರು, ತಿಮ್ಮಣ್ಣ ಕೊರವರ್ ಮತ್ತು ಮಠದ ಸಲಹಾ ಸಮೀತಿ ಸರ್ವ ಸದಸ್ಯರು ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

## ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

**ಬೆಳಗಾವಿ :** ಖಾನಾಪೂರ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಖಾಲಿ ಇರುವ 08 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 35 ಸಹಾಯಕಿಯರ ಹುದ್ದೆಗೆ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಸ್ಥಳೀಯ ಮಹಿಳಾ ಅಭ್ಯರ್ಥಿಗಳು ಅರ್ಜಿಗಳನ್ನು ವೆಬ್‌ಸೈಟ್ https://karnemakaone.kar.nic.in/abcd/ ಮೂಲಕ ಮೇ. 16ರ ಒಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಖಾನಾಪೂರ ಇವೆರನ್ನು ಸಂಪರ್ಕಿಸಬಹುದಾಗಿದೆ ಎಂದು ಅಂ.ಕಾ.ಕ/ಅಂ.ಸ ಅರ್ಜಿ ಪರಿಶೀಲನಾ ಸಮಿತಿ ಹಾಗೂ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

**ಬೆಳಗಾವಿ:** ನಗರದ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಖಾಲಿ ಇರುವ 38 ಸಹಾಯಕಿಯರ ಹುದ್ದೆಗೆ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಸ್ಥಳೀಯ ಮಹಿಳಾ ಅಭ್ಯರ್ಥಿಗಳು ಅರ್ಜಿಗಳನ್ನು ವೆಬ್‌ಸೈಟ್ https://karnemakaone.kar.nic.in/abcd/ ಮೂಲಕ ಮೇ. 16, 2025 ರ ಒಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ ಇವೆರ ದೂ.ಸಂಖ್ಯೆ: 0831-2007020 ಸಂಪರ್ಕಿಸಬಹುದಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಾರ್ವತೆವ್ವ ಶಿವಲಿಂಗಪ್ಪ ಕುಂಬಾರ ನಿಧನ



**ಮುಧೋಳ :** ತಾಲ್ಲೂಕಿನ ಮುಗಳಖೋಡ ಗ್ರಾಮದ ನಿವಾಸಿ ಶ್ರೀಮತಿ ಪಾರ್ವತೆವ್ವ ಶಿವಲಿಂಗಪ್ಪ ಕುಂಬಾರ ತಮ್ಮ 74 ನೆಯ ವಯಸ್ಸಿನಲ್ಲಿ ಏಪ್ರಿಲ್ 22 ರಂದು ಸಾಯಂಕಾಲ ನಿಧನರಾದರು.

ಮೃತರು ತಮ್ಮ ಹಿಂದೆ ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಸಂಚಾರಿ ಸುರಕ್ಷತಾ ನಿಯಮ ಪಾಲಿಸಿ: ಚಂದ್ರಶೇಖರ ದಿಡ್ಡಿ



**ಬಾಗಲಕೋಟೆ :** ಸಂಚಾರಿ ನಿಯಮಗಳು ಮನುಷ್ಯನ ಬದುಕನ್ನು ಉಳಿಸುವ ನಿಟ್ಟಿನಲ್ಲಿ ಮಹತ್ತರವಾಗಿ ಕಾರ್ಯನಿರ್ವಹಿಸುತ್ತವೆ. ಸಂಚಾರಕ್ಕಾಗಿ ವಿವಿಧಪರವಣಿಗೆಗಳು ಹಾಗೂ ವಾಹನಗಳ ವಿಧಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು. ಮುಂದುವರೆದು ಸಂಚಾರಿಕ್ಕಾಗಿ ಸುರಕ್ಷತಾ ನಿಯಮಗಳನ್ನು ಪಾಲಿಸಬೇಕೆಂದು ಬಾಗಲಕೋಟೆಯ ಹಿರಿಯ ನಾಗರಿಕ ವಕೀಲರಾದ ಶ್ರೀ ಚಂದ್ರಶೇಖರ ದಿಡ್ಡಿ ಅವರು ಮೋಟಾರು ವಾಹನ ಕಾಯ್ದೆ ಮತ್ತು ಸಂಚಾರಿ ನಿಯಮಗಳು ಎಂಬ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಇನ್ನೋರ್ವ ಅತಿಥಿಗಳಾದ ಶ್ರೀ.ಎಸ್.ಜಿ.ಹೋತಗೇರಿ ಮಾತನಾಡಿ ಅಪಘಾತಕ್ಕೆ ಕಾರಣ ಹಾಗೂ ಪರಿಣಾಮಗಳನ್ನು ತಿಳಿಸಿ, ನಾವು ಅನುಭವಿಸುವ ಶಾರೀರಿಕ, ಮಾನಸಿಕ ಮತ್ತು ದೈಹಿಕವಾದ ಕೆಟ್ಟ ಪರಿಣಾಮಗಳ ಬಗ್ಗೆ ಸವಿವರವಾದ ವಿವರಣೆಯನ್ನು ನೀಡದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಎಸ್ ಆರ್ ಸಬರದ ಮಾತನಾಡಿ ಸಂಚಾರಿ ಸುರಕ್ಷಿತ ನಿಯಮಗಳನ್ನು ಅದರ ಕಾಯ್ದೆಗಳನ್ನುಹೆಚ್ಚುಕಟ್ಟಾಗಿ ಪಾಲಸಿ ನಮ್ಮ ಜೀವನವನ್ನು, ಜೀವವನ್ನು ರಕ್ಷಿಸಿಕೊಳ್ಳಬೇಕು ಎಂದು ಹೇಳಿದರು.

ನಗರದ ಬಿವಿಬಿ ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2 ಮತ್ತು ಎಸ್ ಸಿ ನಂದಿಮಠ ಕಾನೂನು ಪದವಿ ಕಾಲೇಜಿನ ಐಕ್ಯೂಎಸಿ ವತಿಯಿಂದ ಮಹಾವಿದ್ಯಾಲಯದಲ್ಲಿ ಮೋಟಾರು ವಾಹನ ಕಾಯ್ದೆ ಮತ್ತು ಸಂಚಾರ ನಿಯಮಗಳು ಎಂಬ ಜಾಗೃತಿ ಕಾರ್ಯಕ್ರಮದಲ್ಲಿ ಡಾ. ಡಿ. ಎಸ್. ಲಮಾಣಿ, ಐಕ್ಯೂಎಸಿ ಸಂಯೋಜಕರು,ಡಾ. ಶ್ರೀಮತಿ ಎಸ್. ಆರ್. ಕಲಾದಗಿ, ವಿದ್ಯಾರ್ಥಿ ಕಲ್ಯಾಣಾಧಿಕಾರಿ,, ರಾಷ್ಟ್ರೀಯ ಸೇವಾ ಯೋಜನೆ ಘಟಕ 1ರ ಕಾರ್ಯಕ್ರಮಾಧಿಕಾರಿಗಳಾದ ಶಿವಾನಂದ ಶಿವನಗುತ್ತಿ, ಘಟಕ-2ರ ಕಾರ್ಯಕ್ರಮಾಧಿಕಾರಿ ಶ್ರೀ ಎಸ್. ಕೆ. ಜಹಗೀದಾರ, ಎನ್ ಎನ್ ಎಸ್ ಘಟಕದ ಸದಸ್ಯರು, ಸ್ವಯಂ ಸೇವಕ ರು, ಕಾಲೇಜಿನ ವಿವಿಧ ವಿಭಾಗದ ಮುಖ್ಯಸ್ಥರು,

ಎಸ್ ಸಿ ನಂದಿಮಠ ಕಾನೂನು ಪದವಿ ಕಾಲೇಜಿನ ವಿದ್ಯಾರ್ಥಿಗಳು,ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು.


ಕಾನೂನು ಪದವಿ ಕಾಲೇಜಿನ ವಿದ್ಯಾರ್ಥಿ ಕು. ಲಕ್ಷ್ಮಣ್ಣಾದನಕಟ್ಟಿ ನಿರೂಪಿಸಿ, ಡಾ. ಎ. ಎಂ. ಸತ್ಯನಾಯಕ ಪ್ರಾರ್ಥಿಸಿದರು ಮತ್ತುಕಾನೂನು ಪದವಿ ಕಾಲೇಜಿನ ವಿದ್ಯಾರ್ಥಿ ಕು.ಸೈಫ್‌ಅಲಿಕಾನ್ ವಾಲಿಕಾರಸ್ವಾಗತಿಸಿ, ಪರಿಚಯಿಸಿದರು ಶ್ರೀ.ಡಾ. ಡಿ. ಎಸ್. ಲಮಾಣಿ ವಂದಿಸಿದರು.

# ಬಯಲಾಟ ಸಂಭ್ರಮ: ಬ್ರಿಟಿಷರು ಪುಸ್ತಕ ಜ್ಞಾನಿಗಳು, ಭಾರತೀಯರು ಮಸ್ತಕ ಜ್ಞಾನಿಗಳು: ಡಾ. ವೀರೇಶ ಬಡಿಗೇರ

**ಬಾಗಲಕೋಟೆ :** ಬ್ರಿಟಿಷರು ಪುಸ್ತಕ ಜ್ಞಾನಿಗಳಾದರೆ ಭಾರತೀಯರು ಮಸ್ತಕ ಜ್ಞಾನಿಗಳು, ಸಂವಿಧಾನ ಹಾಗೂ ನೈತಿಕ ಶಿಕ್ಷಣದ ಮೂಲ ತತ್ವಗಳನ್ನು ಜನಪದ ನಮಗೆ ಕಲಿಸುತ್ತದೆ, ಜನಪದರು ಬರೆಯದೆ ಜ್ಞಾನಿಗಳು ಎಂದು ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಹಸ್ತಪ್ರತಿ ವಿಭಾಗದ ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ ಹೇಳಿದರು.

ಅವರು ಕರ್ನಾಟಕ ಬಯಲಾಟ ಅಕಾಡೆಮಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಹಯೋಗದಲ್ಲಿ ಬುಧವಾರ ಕಾಲೇಜಿ ಆವರಣದಲ್ಲಿ ನಡೆದ ಬಯಲಾಟ ಸಂಭ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಬ್ರೀಟಿಷರದ್ದು ಪುಸ್ತಕ ಜ್ಞಾನ, ಭಾರತೀಯರದ್ದು ಮಸ್ತಕ ಜ್ಞಾನ, ಒಬ್ಬ ಬ್ರೀಟಿಷ ಇಂಗ್ಲೀಷ ಕವಿ ಸತ್ತರೆ ಒಂದು ಪುಸ್ತಕ ಉಳಿಯುತ್ತದೆ, ನಮ್ಮ ಭಾರತೀಯ ಕಲಾವಿದ ತೀರಕೊಂಡರೆ ಆ ಕಲಾ ಪರಂಪರೆ ನಾಶವಾಗುತ್ತದೆ, ಅದಕ್ಕೆ ಮಸ್ತಕ ವಿದ್ಯೆ ಎಂದು ಕರೆಯುತ್ತೆವೆ, ಇದು ಅನುಭವದ ವಿದ್ಯೆ ತಿಳಿಯುವುದರಿಂದ ಬರುವಂತಹದ್ದು, ಮಾಡುವುದರಿಂದ ನೋಡುವುದರಿಂದ ಬರುವಂತ ಕಲೆ, ಹಿಂದೆ ನಮಗೆ ಶಾಲೆಯಲ್ಲಿ ಮಾಡಿ ಕಲಿ ನೋಡಿ ತಿಳಿ ಎನ್ನುತ್ತಿದ್ದರು, ನಮ್ಮ ಕಲೆಗಳು ಯಾಗಿವೆಯೆಂದರೆ ನೋಡಿ ತಿಳಿದುಕೊಂಡು ಆಡುವಂತದ್ದು ಇಗಾಗಿ



ಜನಪದ ಕಲಾವಿದರು ಅನಕ್ಷರಸ್ಥರು ಎಂದು ಭಾವಿಸಬಾರದು, ಅವರು ಹಾಡಿರುವ ಬರೆದಿರುವ ತ್ರೀಪದಿ, ಒಡಪುಗಳು ಕಾವ್ಯಗಳನ್ನು ಹಾಗೂ ಜನಪದರು ಆಡಿದ ಮಾತುಗಳನ್ನು ತರಗತಿಯಲ್ಲಿ ಬಿಡಸಲು ಆಗದೆ ಇರುವಷ್ಟು ಮಟ್ಟಿಗೆ ಅವು ಇರುವುದರಿಂದ ನಮ್ಮ ಕಲಾವಿದರು ಅನಕ್ಷರಸ್ಥರಲ್ಲಾ ಅವರು ಬರೆಯದೆ ಜ್ಞಾನಿಗಳು, ಮುಂದಿನ 10 ವರ್ಷ ಕಳೆದರೆ ಬಯಲಾಟ ಪಾರಿಜಾತ ಕಲಾವಿದರು ಸಿಗುವುದಿಲ್ಲಾ, ಇಗಿನ ತಲೆಮಾರು ಹೋದರೆ ಆ ಕಲೆಯು ಹೋಗವ ಸಾಧ್ಯತೆ ಇದೆ. ಪಾರಿಜಾತ ಈ ಭಾಗದ ಬಹಳ ಅಪರೂಪ ಪ್ರಸಿದ್ದವಾಗಿರತಕ್ಕಂತ ಮತ್ತು ಜನಪ್ರೀಯವಾಗಿರುವ ಒಂದು ಆಟ, ಇಲ್ಲಿ ಕೃಷ್ಣ ರುಕ್ಮಣಿ ಸತ್ಯಭಾಮೆ ಕೋರವಂಜಿ ಪಾತ್ರಗಳು ಇಡಿ ಕಥೆ ವಸ್ತು ಇಬ್ಬರ ಹೆಂಡಿರ ಜಗಳ. ಪಾರಿಜಾತ ಅಥವಾ ಬಯಲಾಟ ಈ ಜನಪದ ಕಲೆಗಳು ನಮಗೆ ಕಲಿಸುವುದೆನೆಂದರೆ ವಿನಯ, ಮಾನವೀಯತೆ,ನಿರ್ಮಲಪ್ರೇಮ,ನಿರ್ಮಲ ಭಕ್ತಿ, ಕೂಡಿ ಆಟ ಊಟ ಮಾಡುವುದು ಹೇಗೆ ಮಾತನಾಡುವುದು ಹೇಗೆ ಯಾವುದು ಸಂವಿಧಾನದ ಮೂಲ ತತ್ವಗಳು ಎಂದು ಕರೆಯುತ್ತವೆಯೋ,ನೈತಿಕ ಶಿಕ್ಷಣದ ಮೂಲ ತತ್ವ ಎಂದು ಕರೆಯುತ್ತೆವೆಯೋ ಯಾವುದನ್ನು ತರಗತಿಯಲ್ಲಿ ಕಲಿಸುತ್ತೆವೆ ಅವೆಲ್ಲವನ್ನು ಕಲಿಸಿಕೊಟ್ಟಿದ್ದು ಜನಪದ ಸಂಸ್ಕೃತಿ,ನಮಗೆನೀತಿಯನ್ನುಸಂಸ್ಕಾರವನ್ನು ಕಲಿಸಿಕೋಡುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷರಾದ ಪ್ರೋ.ಕೆ.ಆರ. ದುರ್ಗಾದಾಸ್ ಅವರು ಮಾತನಾಡಿ ನಮ್ಮಲಿರುವ ಅಹಂಕಾರವನ್ನು ಕಳೆದುಕೋಂಡು ಎಲ್ಲರ ಜೊತೆಗೆ ಕೂಡಿಕೊಂಡು ಜನಸಾಮನ್ಯರಂತೆ ಬದುಕುವುದೆ ಜನಪದಗಳ ಆಶಯವಾಗಿದೆ, ದೇವಲೋಕದ ಪಾತ್ರಗಳನ್ನು ಭೂಲೋಕದ ಅಟ್ಟಕ್ಕೆಕರೆದುಕೋಂಡುಮಾತನಾಡಿಸುತ್ತಾರೆ ಇದು ಜನಪದ ಆಟಗಳ ದೊಡ್ಡ ಹಿರಿಮೆ, ಜನರಿಗೆ ಲೋಕದ ನೀತಿಗಳನ್ನು ತಿಳಿಸುತ್ತಾ ಬಂದಿದ್ದು ಜನಪದ ಕಲೆಗಳ ಒಂದು ಬಹುದೊಡ್ಡ ಶಕ್ತಿ ಎಂದರು.

ಅಕಾಡಮಿ ಸದಸ್ಯರಾದ ಅನಸೂಯಾ ವಡ್ಡರ, ಕಾಲೇಜಿನ ಪ್ರಾಚಾರ್ಯ ಗೀತಾಂಜಲಿ ಶ್ರೀನಿವಾಸ ರಾವ್, ಸಂಸ್ಕೃತಿ ವಿಭಾಗದ ಮುಖ್ಯಸ್ಥ ಡಾ. ಮೌನೇಶ ಕಮ್ಮಾರ, ಪ್ರವೀಣ ಬಿ, ಜಾಜಿಮಲ್ಲಿಗೆ ಕವಿ ಸತ್ಯಾನಂದ ಪಾತ್ರೋಟ, ಸುನೀಲ ನಡಕಟ್ಟಿ, ಡಾ.ಎಮ್.ಎಚ್.ತಹಸಿಲ್ದಾರ. ಡಾ. ಕವಿತಾ ಮುತ್ತಪ್ಪ, ಸಂಗಮೇಶ ಬ್ಯಾಳಿ, ಚಂದ್ರಶೇಖರ ಕಾಳನ್ನವರ, ಪಿ.ಕೆ ಕಾರಬಾರಿ, ಎಮ್.ವಾಯ.ಬಡಿಗೇರ, ಡಾ.ಪಕೀರಪ್ಪ, ಸೇರಿದಂತೆ ಅನೇಕರು ವೇದಿಕೆ ಮೇಲೆ ಇದ್ದರು.

ಕಾರ್ಯಕ್ರಮದಲ್ಲಿ ಜನಪದ ಕಲಾವಿದರನ್ನು ಸನ್ಮಾನಿಸಿ ಗೌರವಿಸಲಾಯಿತು, ನಂತರ ಜೀಮೂತವಾಹನ ಬಯಲಾಟ ಪ್ರದರ್ಶನ ಹಾಗೂ ಶ್ರೀಕೃಷ್ಣ ಪಾರಿಜಾತ ಪ್ರದರ್ಶನ ಜರುಗಿದವು. ಕಾರ್ಯಕ್ರಮಕ್ಕೂ ಮುಂಚೆ ವಿದ್ಯಾರ್ಥಿನಿತರಿಂದ ಸಾಂಸ್ಕೃತಿಕ ಕುಂಭ ಮೇರವಣಿಗೆ ಜರುಗಿತು.

# ಉಗ್ರರ ದಾಳಿ ಶಾಸಕ ಸಿದ್ದು ಸವದಿ ಖಂಡನೆ

**ಚಿಮ್ಮಡ:** ಜಮ್ಮು ಮತ್ತು ಕಾಶ್ಮೀರದ ಅನಂತನಾಗ ಜಿಲ್ಲೆಯ ಪಹಲ್ಗಾಮ್‌ನ ಬೈರಸನ್ ವ್ಯಾಲಿಯಲ್ಲಿ ಮಂಗಳವಾರ ಭಯೋತ್ಪಾದಕರು ನಡೆಸಿದ ಧಾಳಿಯು ಅತ್ಯಂತ ಹೇಯ, ಅಮಾನವೀಯ ಕ್ರತ್ಯವಾಗಿದ್ದು ಇದನ್ನು ಕಠೀಣ ಶಬ್ದಗಳ ಮೂಲಕ ಖಂಡಿಸುವುದಾಗಿ ಶಾಸಕ ಸಿದ್ದು ಸವದಿ ಹೇಳಿದ್ದಾರೆ. ಹೆಸರು, ಧರ್ಮವನ್ನು ಖಚಿತಪಡಿಸಿಕೊಂಡು ಹಿಂದುಗಳನ್ನೇ ಗುರಿಯಾಗಿಸಿ ನಡೆಸಿರುವುದು ಅತ್ಯಂತ ಕ್ರೂರವಾಗಿದ್ದು ಇದಕ್ಕೆ ತಕ್ಕ ಶಿಕ್ಷೆಯನ್ನು ಉಗ್ರರು ಅನುಭವಿಸಲೇ ಬೇಕಾಗುತ್ತದೆ. ಶಾಂತವಾಗಿ ಅಭಿವೃದ್ಧಿ ಪಥದತ್ತ ಹೊರಟಿದ್ದ ಕಾಶ್ಮೀರ ಪ್ರವಾಸಿಗರ ಹೆಚ್ಚಳದಿಂದ ಅಲ್ಲಿನ ಜನಜೀವನ ಸುಧಾರಣೆಯತ್ತ ದಾಪುಗಾಲಿಟ್ಟಿತ್ತು, ಇದನ್ನು ಸಹಿಸದ ಉಗ್ರರು ಮತ್ತೊಮ್ಮೆ ನೀಚ ಕೃತ್ಯ ಎಸಗಿದ್ದು ಇದನ್ನು ಪ್ರತಿಯೊಬ್ಬರು ಪಕ್ಷ, ಜಾತಿ, ಧರ್ಮ ಬದಿಗಿಟ್ಟು ಖಂಡಿಸಬೇಕು, ಉಗ್ರರಿಗೆ ಅತ್ಯಂತ ಕಠೀಣ ಶಿಕ್ಷಯಾಗಬೇಕು. ಅವರನ್ನು ಹುಡುಕಿ, ಹುಡುಕಿ ಹೊಡೆಯುವ ಕಾರ್ಯ ಕೇಂದ್ರದ ನರೇಂದ್ರ ಮೋದಿ ಸರಕಾರ ಮಾಡುತ್ತದೆ ಎಂಬ ಭರವಸೆ ಇದೆ ಎಂದರು.

# ಉಗ್ರರ ವಿರುದ್ಧ ಸೇಡು ತೀರಿಸಿಕೊಳ್ಳಬೇಕು: ಜಬ್ಬಾರ ಕಲಬುಗಿ

**ಇಲಕಲ್ಲ :** ಮಂಗಳವಾರ ಕಾಶ್ಮಿರದ ಪಹಲ್ಗಾಂವ್ ಎಂಬಲ್ಲಿ ಅಮಾಯಕ ಪ್ರವಾಸಿ ನಾಗರಿಕರ ಮೇಲೆ ನಡೆದ ದಾಳಿಯಿಂದ ಬಹುದೊಡ್ಡ ನರಮೇಧ ನಡೆದಿದೆ, ಇದು ಅತ್ಯಂತ ಖಂಡನಾರ್ಹವಾಗಿದೆ ಇದು ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಘಟನೆಯಾಗಿದೆ ಈ ಘಟನೆಗೆ ಸಾಕ್ಷಿಯಾದ ಉಗ್ರರನ್ನು ನಿರ್ದಾಕ್ಷಿಣ್ಯವಾಗಿ ಸೇಡು ತಿರೀಸಿಕೊಳ್ಳಬೇಕು ಎಂದು ಕರ್ನಾಟಕ ಮುಸ್ಲಿಂ ಯೂನಿಟಿ ರಾಜ್ಯಾಧ್ಯಕ್ಷ ಜಬ್ಬಾರ ಕಲಬುರ್ಗಿ ಕೇಂದ್ರವನ್ನು ಒತ್ತಾಯಿಸಿದ್ದಾರೆ. ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿರುವ ಅವರು ಜಮ್ಮು ಕಾಶ್ಮೀರ ಕಣಿವೆಯಲ್ಲಿ ನಾಗರಿಕರ ಮೇಲೆ ಆದ ಅತ್ಯಂತ ದೊಡ್ಡ ದಾಳಿ ಇದಾಗಿದೆ ಪುಲ್ವಾಮಾ ದಾಳಿಯ ನಂತರ ಪಾಠ ಕಲಿಯಬೇಕಿದ್ದ ಕೇಂದ್ರ ಸರ್ಕಾರ ನಾಗರಿಕರಿಗೆ ರಕ್ಷಣೆ ನೀಡುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ ಎಂದು ದೂರಿದ್ದಾರೆ.



ನುಸುಳು ಖೋರರು ಆತಂಕವಾದಿಗಳನ್ನು ಸೆದೆ ಬಡಿಯಲಾಗಿದೆ ಎಂದು ಹೇಳಿಕೊಂಡಿರುವ ಕೇಂದ್ರ ಸರ್ಕಾರದ ಕೈಯಲ್ಲಿ ದೇಶದ ಗಡಿಗಳಿವೆ, ಗಡಿ ರಕ್ಷಣಾ ಪಡೆ ಇದೆ, ಪ್ಯಾರಾಮಿಲ್ಟ್ರಿ ಭಾರತಿಯ ಸೇನೆ, ಪೊಲೀಸ ಸೇರಿ ಗುಪ್ತಚರ ಇಲಾಖೆ ಎಲ್ಲವೂ ಕೇಂದ್ರದ ಕಪಿಮುಷ್ಠಿಯಲ್ಲಿದ್ದರೂ ಶತ್ರು ರಾಷ್ಟ್ರದಿಂದ, ಉಗ್ರವಾದಿಗಳು ಬಂದೂಕು, ಮದ್ದುಗುಂಡು ಹೊತ್ತು ಹೇಗೆ ಬರುತ್ತಾರೆ ಎಂಬ ಪ್ರಶ್ನೆಗೆ ಉತ್ತರಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ.

ಪ್ರಧಾನಿ ಮೊದಿಜಿ, ಗ್ರಹ ಸಚಿವ ಅಮೀತ ಷಾ ವಿರೋದ ಪಕ್ಷದಲ್ಲಿದ್ದಾಗ ಆಗಿನ ಪ್ರಧಾನಿ ಮನಮೊಹನಸಿಂಗ್‌ಜೀರವರಿಗೆ ಇಂತಹದ್ದೇ ಪ್ರಶ್ನೆ ಕೇಳುತ್ತಿದ್ದರು. ಪಹಲ್ಗಾಂವ್ ದಾಳಿ ನಡೆದ ಜಾಗದಲ್ಲಿ ಕನಿಷ್ಟ 2000 ಪ್ರವಾಸಿಗರು ಇದ್ದರೂ ಈ ಸ್ಥಳದಲ್ಲಿ ಸರ್ಕಾರ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲದಿರುವುದನ್ನು ಗಮನಿಸಿದರೆ ಸರ್ಕಾರ ಸಾರ್ವಜನಿಕರಿಗೆ ಸುರಕ್ಷತೆ ನೀಡುವಲ್ಲಿ ಸಂಪೂರ್ಣ ವಿಫಲಗೊಂಡಿದೆ ಇದರ ಹೊಣೆ ಸರ್ಕಾರ ಹೊರಬೇಕು ಎಂದರು.

ಪುಲ್ವಾಮಾದಲ್ಲಿ 40 ಸೈನಿಕರನ್ನು ಕಳೆದುಕೊಂಡಿದ್ದೇವೆ ಪಹಲ್ಗಾಂವ್‌ದಲ್ಲಿ 28 ಪ್ರವಾಸಿ ಅಮಾಯಕರನ್ನು ಕಳೆದಕೊಂಡಿದ್ದೇವೆ ಇಷ್ಟೆಲ್ಲನರಮೇಧಗಳು ನಡೆದಾಗಲೆಲ್ಲ ರಕ್ಷಣೆಯ ನ್ಯೂನ್ಯತೆಗಳದ್ದೆ ಚರ್ಚೆ ಇರುತ್ತದೆ ಈ ಬಗ್ಗೆ ಭಾರತದ ಮಾಧ್ಯಮಗಳು ಸರ್ಕಾರವನ್ನು ಪ್ರಶ್ನಿಸುವ ಬದಲಿಗೆ ಸರ್ಕಾರ ಉಳಿಸಲು ಬೆನ್ನಿಗೆ ನಿಂತಂತೆ ವರ್ತಿಸುತ್ತಿವೆ ಇದು ದುರಾದೃಷ್ಟ ಎಂದರು.

ಪ್ರಧಾನಿ ಮೊದಿಜಿ ಗುಜರಾತ ಮುಖ್ಯಮಂತ್ರಿಯಾಗಿದ್ದಾಗ ದೇಶದ ಗಡಿ, ಸೈನಿಕ, ಭಾರತಿಯ ಗಡಿ ರಕ್ಷಣೆ, ಮತ್ತು ಗುಪ್ತಚರ ಇಲಾಖೆ ಬಗ್ಗೆ ಪ್ರಶ್ನಿಸಿದ ರೀತಿಯಲ್ಲೇ ಇಂದು ವಿರೋದ ಪಕ್ಷದಲ್ಲಿ ಕೂತಿರುವ ಕಾಂಗ್ರೇಸ್ ಮುಖಂಡರು ಕೇಂದ್ರ ಸರ್ಕಾರವನ್ನು ಪ್ರಶ್ನಿಸುವ ಧರ್ಯ ಪ್ರದರ್ಶಿಸಬೇಕು ಎಂದು ಆಗ್ರಹಿಸಿದ್ದಾರೆ.

# ವಾಣಿಜ್ಯ ವಿಭಾಗವು ಉದ್ಯೋಗ ಅವಕಾಶಗಳನ್ನು ನೀಡುವ ಖಜಾನೆ: ಶಿರೂರ



**ವಿಜಯಪುರ :** ಸ್ಥಳೀಯ ಚಾಣಕ್ಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ವಾಣಿಜ್ಯ ವಿಭಾಗದ ಅಡಿಯಲ್ಲಿ ಮಂಗಳವಾರ ವಿಶೇಷ ಉಪನ್ಯಾಸವನ್ನು ಹಮ್ಮಿಕೊಂಡಿತ್ತು.

ಈ ಕಾರ್ಯಕ್ರಮಕ್ಕೆ ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಅಜಿತ ಶಿರೂರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವಾಣಿಜ್ಯ ವಿಭಾಗವು ಉದ್ಯೋಗ ಅವಕಾಶಗಳನ್ನು ನೀಡುವ ಒಂದು ಖಜಾನೆಯಾಗಿದೆ. ಸರ್ಕಾರಿ ಮತ್ತು ಸರ್ಕಾರೇತರ ವಲಯದಲ್ಲಿ ಉದ್ಯೋಗವನ್ನು ಪಡೆದುಕೊಳ್ಳಲು ಸರಳವಾದ ವಿಭಾಗವಾಗಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ವಾಣಿಜ್ಯ ವಿಭಾಗದ ಉಪನ್ಯಾಸಕ ಜಿ.ಎಸ್. ಬಗಲಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಾಣಿಜ್ಯ ವಿಭಾಗವು ಸಮುದ್ರವಿದ್ದಂತೆ. ವಾಣಿಜ್ಯ ಪದವಿಯನ್ನು ಮಾಡಿದರೆ ಏಲ್ಲೆಲ್ಲಿ ಬೇಡಿಕೆ ಎಂದರೆ ಲೆಕ್ಕಶಾಸ್ತ್ರ ಮತ್ತು ಆರ್ಥಿಕ ನಿರ್ವಹಣೆ, ಬ್ಯಾಂಕಿಂಗ್ ಮತ್ತು ಹಣಕಾಸಿನ ತಂತ್ರಜ್ಞಾನ, ಉದ್ದಿಮೆ ಮತ್ತು ಉದ್ದಿಮೆ ಶೀಲತೆಯಲ್ಲಿ ಉದ್ಯೋಗಾವಕಾಶಗಳನ್ನು ಪಡೆಯಲು ಹಾಗೂ ಸೃಷ್ಟಿಸಲು ಸಹಾಯಕಾರಿಯಾಗಿದೆ ಎಂದು ಹೇಳಿದರು.

ಇನ್ನೋರ್ವ ಉಪನ್ಯಾಸಕ ಜಿ.ಡಿ. ಹಿರೇಮಠ ಅವರು ಮಾತನಾಡಿ,ರೇಸಿಯೋ,ಎಲ್.ಐ.ಸಿ.ಸ್‌ಈವಿಷಯವು ನಿರ್ವಹಣೆಗೆ ಬಹಳ ಅತ್ಯವಶ್ಯಕವಾಗಿದೆ. ಇದನ್ನು ಕಲಿತರೆ ಸುಲಭವಾಗಿ ವ್ಯವಹಾರ ನಿರ್ವಹಣೆಯನ್ನು ಮಾಡಬಹುದು ಎಂದು ತಿಳಿ ಹೇಳಿದರು. ಕಾಲೇಜಿನ ಪ್ರಾಚಾರ್ಯ ಎಸ್.ಟಿ. ಮೇರವಾಡೆ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ಸಾಹಿತ್ಯ ಅಧ್ಯಯನ ಮಾಡಿದ ನಾನು ವಾಣಿಜ್ಯ ಮತ್ತು ಅರ್ಥಶಾಸ್ತ್ರವನ್ನು ಅನುಭವದಿಂದ ಕಲಿತಿರುವೆ. ಯಾವುದೇ ಪದವಿ ಓದಿದರೂ ವಾಣಿಜ್ಯಶಾಸ್ತ್ರ ತಿಳಿದುಕೊಳ್ಳಲೇಬೇಕೆಂದು ತಿಳಿ ಹೇಳಿದರು.

ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಉಪನ್ಯಾಸಕ ಬಿ.ಎ. ಕುಲಕರ್ಣಿ, ಮಂದಾರ ಗಬ್ಬೂರ, ಮೇಘಾ ಹಿರೇಮಠ, ಎಮ್.ಟಿ. ಶೇಲಾರ ಹಾಗೂ ಎಲ್ಲ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಾಜರಿದ್ದರು.

# ಭೂ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ: ನ್ಯಾಯಾಧೀಶ ಅರವಿಂದ ಹಾಗರಗಿ




**ವಿಜಯಪುರ :** ಭೂಮಿಯು ಸಕಲ ಜೀವರಾಶಿಗಳಿಗೆ ಆಶ್ರಯ ತಾಣವಾಗಿದೆ. ಇದನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ಅರವಿಂದ ಎಸ್. ಹಾಗರಗಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಗರದ ಸಹಾಯಕ ನಿರ್ದೇಶಕರ ಕಛೇರಿ ವಿಭಾಗೀಯ ಗುಣ ನಿಯಂತ್ರಣ ತರಬೇತಿ ಕೇಂದ್ರದಲ್ಲಿ ಮಂಗಳವಾರ ಜರುಗಿದ ವಿಶ್ವ ಭೂದಿನ ಆಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾಲಿನ್ಯದಿಂದ ಪರಿಸರ ನಾಶವಾಗಿ ಭೂಮಿಯನ್ನು ವಿನಾಶದ ಅಂಚಿನತ್ತ ಕೊಂಡೊಯುತ್ತದೆ. ಅದನ್ನು ನಾವು ಕಾಪಾಡಬೇಕು ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾ ಪರಿಸರ ಅಧಿಕಾರಿ ವಿವೇಕ ಗುನಗ ಮಾತನಾಡಿ, ಮಾನವ ಅಗತ್ಯತೆಯ ಮಿತಿಯನ್ನು ಕಂಡುಕೊಂಡಾಗ ಪ್ರಕೃತಿ ಸಂರಕ್ಷಣೆ ಮಾಡಲು ಸಾಧ್ಯ ಎಂದರು.

ವಕೀಲರ ಸಂಘದ ಅಧ್ಯಕ್ಷ ಡಿ.ಜಿ. ಬಿರಾದಾರ ಅವರು ಮಾತನಾಡಿದರು.

ರಾಷ್ಟ್ರೀಯ ಜಲ ವಿಜ್ಞಾನ ಸಂಸ್ಥೆಯ ರೂರ್ಕೆಲಾ ಬೆಳಗಾವಿ ವಿಭಾಗದ ನಿವೃತ್ತ ವಿಜ್ಞಾನಿಗಳು ಉಪನ್ಯಾಸ ನೀಡಿದರು.

ಜಿಲ್ಲಾ ಅಂತರ್ಜಲ ನಿರ್ದೇಶನಾಲಯ ಕಛೇರಿಯ ಹಿರಿಯ ಭೂ ವಿಜ್ಞಾನಿ ಮಹೇಶ ಬಿರಾಜನವರ ಹಾಗೂ ಟಿ.ಚಂದ್ರಶೇಖರ ಉಪಸ್ಥಿತರಿದ್ದರು.

# ಮಹಿಳಾ ವಿವಿ ಸಂಶೋಧನೆ ವಿದ್ಯಾರ್ಥಿನಿಯರ ಹಾಸ್ಟೇಲ್ ಕಟ್ಟಡಕ್ಕೆ 50 ಲಕ್ಷ ವಿಶೇಷ ಅನುದಾನ

**ವಿಜಯಪುರ :** ಬಿ.ಎಲ್.ಡಿ.ಇ ಸಂಸ್ಥೆ ಅಧ್ಯಕ್ಷ ಮತ್ತು ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರು ಬಿ.ಎಲ್.ಡಿ.ಇ ಡೀಮ್ಡ್ ವಿಶ್ವ ವಿದ್ಯಾಲಯ ವತಿಯಿಂದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾವಿಶ್ವವಿದ್ಯಾಲಯದಲ್ಲಿಸಂಶೋಧನೆ ವಿದ್ಯಾರ್ಥಿನಿಯರ ಹಾಸ್ಟೇಲ್ ನಿರ್ಮಾಣಕ್ಕೆ ರೂ.50ಲಕ್ಷವಿಶೇಷಅನುದಾನನೀಡಿದ್ದಾರೆ. ಮಂಗಳವಾರಡೀಮ್ಡ್‌ವಿಶ್ವವಿದ್ಯಾಲಯದಲ್ಲಿ ಮಹಿಳಾ ವಿವಿಯ ಹಂಗಾಮಿ ಕುಲಪತಿ ಪ್ರೊ. ಶಾಂತಾದೇವಿ ಟಿ.ಅವರಿಗೆ ಸಚಿವರು ವಿಶೇಷ ಅನುದಾನದ ಚೆಕ್ ವಿತರಿಸಿದರು.

ಇತ್ತೀಚೆಗೆ ಮಹಿಳಾ ವಿವಿಯಲ್ಲಿ ನಡೆದ ಮಹಿಳಾದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಚಿವರಿಗೆ ಕುಲಪತಿಗಳು ವಿದ್ಯಾರ್ಥಿನಿಯರಿಗೆ ಮೂಲಸೌಕರ್ಯ ಒದಗಿಸಲು ಅನುದಾನದ ಕೊರತೆ ಇದೆ ಎಂದು ಗಮನ ಸೆಳೆದಿದ್ದರು. ಅಂದು ನೀಡಿದ ಭರವಸೆಯಂತೆ ಸಚಿವರು ಅನುದಾನದ ಚೆಕ್ ವಿತರಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಗುಣಮಟ್ಟದ ಕಾಮಗಾರಿ ಕೈಗೊಳ್ಳುವಂತೆ ಸೂಚನೆ ನೀಡಿದರು. ಅಲ್ಲದೇ, ಮುಂಬರುವ ದಿನಗಳಲ್ಲಿ ಸರಕಾರದಿಂದ ಮಹಿಳಾ ವಿವಿಯಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಒದಗಿಸಲು ಪ್ರಯತ್ನಿಸುವುದಾಗಿ ತಿಳಿಸಿದರು.

ಮಹಿಳಾ ವಿವಿ ಹಂಗಾಮಿ ಕುಲಪತಿ ಡಾ. ಶಾಂತಾದೇವಿ ಟಿ. ಮಾತನಾಡಿ, ಬಿ.ಎಲ್.ಡಿ.ಇ ಡೀಮ್ಡ್ ವಿಶ್ವ ವಿದ್ಯಾಲಯ ಮತ್ತು ಸಚಿವ ಎಂ.ಬಿ.ಪಾಟೀಲ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಿ.ಎಲ್.ಡಿ.ಇ ಡೀಮ್ಡ್ ವಿವಿ ಸಮಕುಲಾಧಿಪತಿ ಡಾ. ವೈ.ಎಂ. ಜಯರಾಜ,

ಕುಲಪತಿ ಡಾ. ಆರ್.ಎಸ್. ಮುಧೋಳ, ರಜಿಸ್ಟ್ರಾರ್ಡ್ ಆರ್.ವಿ. ಕುಲಕರ್ಣಿ, ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ಪರೀಕ್ಷೆ ನಿಯಂತ್ರಣಾಧಿಕಾರಿ ಡಾ. ಎಸ್. ಎಸ್. ದೇವರಮನಿ, ಮಹಿಳಾ ವಿವಿ ಮೌಲ್ಯಮಾಪನ ಕುಲಸಚಿವ ಪ್ರೊ. ಎಚ್. ಎಂ. ಚಂದ್ರಶೇಖರ, ವಿದ್ಯಾರ್ಥಿಗಳ ಕಲ್ಯಾಣಾಧಿಕಾರಿ ಪ್ರೊ. ಲಕ್ಷ್ಮಿದೇವಿ ವೈ, ಸಹರಜಿಸ್ಟ್ರಾರ್ಡ್ ನಟರಾಜ ಎ. ದುರಗಣ್ಣನವರ ಉಪಸ್ಥಿತರಿದ್ದರು.

ಮಹಿಳಾ ವಿವಿಯಲ್ಲಿ ನಿರ್ಮಿಸಲಾಗುವ ಸಂಶೋಧನೆ ವಿದ್ಯಾರ್ಥಿನಿಯರ ಹಾಸ್ಟೇಲ್ ಕಟ್ಟಡದ ರೂಪುರೇಷೆಗಳನ್ನು

ಬಿ.ಎಲ್.ಡಿ.ಇ ಡೀಮ್ಡ್ ವಿವಿ ಮತ್ತು ಮಹಿಳಾ ವಿವಿ ಅಧಿಕಾರಿಗಳು ಚರ್ಚಿಸಿ ನಿರ್ಧರಿಸಲಿದ್ದಾರೆ.

# ಬಿಎಲ್‌ಡಿಇ ಆಯುರ್ವೇದ ಕಾಲೇಜಿಗೆ 17 ಎಕರೆ 20 ಗುಂಟೆ ಜಾಗ ಲೀಜ್ ಮಂಜೂರು: ಸುನೀಲಗೌಡ

**ವಿಜಯಪುರ :** ರಾಜ್ಯ ಸರ್ಕಾರ ಆಯುರ್ವೇದ ಮಹಾವಿದ್ಯಾಲಯಕ್ಕೆ ಕೋಟೆ ಗೋಡೆ ಪಕ್ಕದಲ್ಲಿ ಲೀಸ್ ಆಧಾರದ ಮೇಲೆ 17ಎಕರೆ 20ಗುಂಟೆ ಜಮೀನನ್ನು ಮಂಜೂರು ಮಾಡಿದ್ದು, ಈ ಜಮೀನಿನಲ್ಲಿ ಅಂದಾಜು 1ಎಕರೆ 10ಗುಂಟೆಜಾಗೆಯಲ್ಲಿ ಈಗಾಗಲೇ ಕೆಲವರು ಕಾನೂನು ಬಾಹಿರವಾಗಿ ಅತಿಕ್ರಮಣ ಮಾಡಿಕೊಂಡು ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಬಾಕಿ ಉಳಿದಿರುವ 16ಎಕರೆ 10ಗುಂಟೆ ಸರ್ಕಾರಿ ಆಸ್ತಿಯನ್ನು ಕಾಪಾಡಿಕೊಳ್ಳುವುದು ಲೀಸ್ ಪಡೆದ ಬಿ.ಎಲ್.ಡಿ.ಇ ಸಂಸ್ಥೆಯ ಜವಾಬ್ದಾರಿಯಾಗಿದೆ ಎಂದು ಸಂಸ್ಥೆ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಇತ್ತೀಚೆಗೆ ಕೆಲವು ವ್ಯಕ್ತಿಗಳು ಈ ಕೋಟೆಗೋಡೆಯಲ್ಲಿ ಚಾಲುಕ್ಯರ ಕಾಲದ ಸ್ವಯಂಭು ದೇವಸ್ಥಾನ ಇದೆ. ಬಿ.ಎಲ್.ಡಿ.ಇ ಸಂಸ್ಥೆಯವರು ಹಿಂದು ದೇವಸ್ಥಾನದ ಮೇಲೆ ದಾಳಿ ಮಾಡಿ, ದೇವಸ್ಥಾನದ ಜಾಗವನ್ನು ಅತಿಕ್ರಮಿಸಿ, ಅಕ್ರಮ ಕಟ್ಟಡ ಕಟ್ಟಿ, ಷಡ್ಯಂತ್ರ ಮಾಡಿದ್ದಾರೆ ಎಂದು ಅಪಪ್ರಚಾರ ಮಾಡುತ್ತಿದ್ದು, ಇದು ವಾಸ್ತವಕ್ಕೆ ದೂರ ಎಂದು ತಿಳಿಸಿದ್ದಾರೆ.



ವಾಸ್ತವವಾಗಿ ವಿಜಯಪುರದ ಆದಿಲ್ ಶಾಹಿ ಅರಸರ ಕೋಟೆ ಗೋಡೆಗೆ ಹೊಂದಿಕೊಂಡು ಸಿ.ಟಿ.ಎಸ್ ನಂ:605ಎ/1ಎ ಕ್ಷೇತ್ರ 2ಎಕರೆ, 20ಗುಂಟೆ ಮತ್ತು ಸಿ.ಟಿ.ಎಸ್ ನಂ:605ಎ/1ಎ/1ಎ/2 ಕ್ಷೇತ್ರ 15ಎಕರೆಹೀಗೆ ಒಟ್ಟು ಆಸ್ತಿ 17ಎಕರೆ, 20 ಗುಂಟೆ ಪ್ರದೇಶ ಸರ್ಕಾರಿ ಜಾಗವನ್ನು 30 ವರ್ಷಗಳ ಅವಧಿಗೆ ಆಯುರ್ವೇದ ಮಹಾವಿದ್ಯಾಲಯಸಮಿತಿಗೆಸರ್ಕಾರದಿಂದ ಲೀಸ್ ನೀಡಲಾಗಿದೆ. 2011ನೇವರ್ಷದಲ್ಲಿ ಆಯುರ್ವೇದ ಮಹಾವಿದ್ಯಾಲಯ ಸಮಿತಿ ಬಿ.ಎಲ್.ಡಿ.ಇ ಸಂಸ್ಥೆಯಲ್ಲಿ ವಿಲೀನಗೊಂಡಿದೆ. ಸಂಸ್ಥೆ ವಿಲೀನದ ನಂತರ ಸರ್ಕಾರದಿಂದ ಮತ್ತೆ ಬಿ.ಎಲ್.ಡಿ.ಇ ಸಂಸ್ಥೆಗೆ 30ವರ್ಷಗಳ ಕಾಲ ಲೀಸ್ ಮುಂದುವರೆಸಲಾಗಿದೆ. ಸರ್ಕಾರ ಸಂಸ್ಥೆಗೆ ನೀಡಿದ ಆಸ್ತಿಯನ್ನು ಕಾಪಾಡಿಕೊಳ್ಳುವುದು ನಮ್ಮ ಜವಾಬ್ದಾರಿ ಆಗಿದೆ. ಸರ್ಕಾರ ಆಯುರ್ವೇದ ಮಹಾವಿದ್ಯಾಲಯಕ್ಕೆ ಲೀಸ್ ನೀಡಿದ ಆಸ್ತಿಯಲ್ಲಿ ಮುರಾಣಕೇರಿಯ ನಿವಾಸಿಗಳಿಂದ ಹಾಗೂ ಇತರೆ ಎರಡು ಕಡೆ 1 ಎಕರೆ 10ಗುಂಟೆ ಜಮೀನು ಒತ್ತುವರಿ ಮಾಡಿಕೊಂಡು ಅಕ್ರಮವಾಗಿ ಕಟ್ಟಡಗಳನ್ನು ಕಟ್ಟಿಕೊಂಡಿರುತ್ತಾರೆ. ಸಂಸ್ಥೆಗೆ ಸೇರಿದ ಸರ್ಕಾರಿ ಜಾಗೆಯನ್ನು ಅತಿಕ್ರಮಣ ಮಾಡಿಕೊಂಡಿರುವವರನ್ನು ಅಲ್ಲಿಂದ ತೆರವುಗೊಳಿಸುವಂತೆ ಸಂಬಂಧಿಸಿದವರಿಗೆ ನಾನು ಪತ್ರ ಬರೆಯುತ್ತೇನೆ ಎಂದು ತಿಳಿಸಿದ್ದಾರೆ.

ಐತಿಹಾಸಿಕ ಕೋಟೆಗೋಡೆ ಭಾರತ ಸರ್ಕಾರದ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎ.ಎಸ್.ಐ) ವ್ಯಾಪ್ತಿಗೆ ಬರುತ್ತದೆ. ಅವರ ನಿಯಮಗಳು ಕಠಿಣವಾಗಿವೆ. ಐತಿಹಾಸಿಕ ದಾಖಲೆಗಳು, ಶಾಸನಗಳು ಆಧರಿಸಿ ಈ ದೇವಸ್ಥಾನದ ಖಚಿತತೆ ಕುರಿತು ಪುರಾತತ್ವ ಇಲಾಖೆ ಅಧಿಕಾರಿಗಳಿಗೆ ಕ್ರಮ ಜರುಗಿಸುವಂತೆ ಸಂಸ್ಥೆ ವತಿಯಿಂದಲೇ ಕೋರಿದ್ದೇವೆ. ಅದು ಸತ್ಯಾಂಶಗಳಿಂದ ಕೂಡಿದ್ದರೆ ಪ್ರಾಚ್ಯವಸ್ತು ಇಲಾಖೆ ಅದನ್ನು ಸಂರಕ್ಷಿಸಲಿದೆ.ಸಂಸ್ಥೆ ವತಿಯಿಂದ ಅದಕ್ಕೆ ಎಲ್ಲ ಸಹಕಾರ ನೀಡುತ್ತೇವೆ ಎಂದು ತಿಳಿಸಿದ್ದಾರೆ.

ಬಿ.ಎಲ್.ಡಿ.ಇಸಂಸ್ಥೆಎಲ್ಲಜಾತಿ-ಜನಾಂಗದ ಸದಸ್ಯರಿರುವ ಈ ಭಾಗದ ಅತೀ ದೊಡ್ಡ ಲಿಂಗಾಯತಶಿಕ್ಷಣಸಂಸ್ಥೆಯಾಗಿದ್ದು,ಕಾಲ-ಕಾಲಕ್ಕೆ ನಮ್ಮ ಸಂಸ್ಥೆ ಆಸ್ತಿಗಳನ್ನು ಹಲವಾರು ದೇವಾಲಯಗಳಿಗೆ ಈ ಹಿಂದೆ ನಾವಾಗಿಯೇ ಬಿಟ್ಟು ಕೊಟ್ಟಿರುವ ಉದಾಹರಣೆಗಳು ಇವೆ. ಹೀಗಾಗಿ, ಬೇರೆಯವರ ಆಸ್ತಿಯನ್ನು ಪಡೆದುಕೊಳ್ಳುವುದು, ಅದರ ಮೇಲೆ ಹಕ್ಕು ಚಲಾಯಿಸುವುದು ನಮ್ಮ ಸಂಸ್ಥೆಯ ಇತಿಹಾಸದಲ್ಲಿಯೇ ಇಲ್ಲ ಎಂದು ಸುನೀಲಗೌಡ ಪಾಟೀಲ ಸ್ಪಷ್ಟೀಕರಣನೀಡಿದ್ದಾರೆ.

ಕಳೆದ ಒಂದು ತಿಂಗಳಿನಿಂದ ಪದೇ-ಪದೇ ಸಾಮಾಜಿಕಜಾಲತಾಣಗಳಲ್ಲಿಬಿ.ಎಲ್.ಡಿ.ಇ ಸಂಸ್ಥೆ, ಆಡಳಿತ ಮಂಡಳಿಯ ಕುರಿತು ಹಗುರವಾಗಿ ಸುಳ್ಳು ಸುದ್ದಿಗಳನ್ನು ತೇಲಿ ಬಿಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ಮುಂದಾಗಿದ್ದೇವೆ ಎಂದು ಸುನೀಲಗೌಡ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

